ಶಾಲಾ ಶಿಕ್ಷಣ ಇಲಾಖೆ

# ಮರುಸಿಂಚನ

# ಕನ್ನಡ

**2026–2027**

## ವಿದ್ಯಾರ್ಥಿ ಅಭ್ಯಾಸ ಪುಸ್ತಕ

**6**

ಆರನೇ ತರಗತಿ

@KTBS NOT TO BE REPUBLISHED

**ಸಮಗ್ರ ಶಿಕ್ಷಣ– ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಚೇರಿ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು – 560 001

## ಪರಿಕಲ್ಪನೆ

| | | |
|---|---|---|
| **ಶ್ರೀಮತಿ ವಿ. ರಶ್ಮಿ ಮಹೇಶ್** ಭಾ.ಆ.ಸೇ<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ<br>ಕರ್ನಾಟಕ ಸರ್ಕಾರ | **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್** ಭಾ.ಆ.ಸೇ<br>ಆಯುಕ್ತರು<br>ಶಾಲಾ ಶಿಕ್ಷಣ ಇಲಾಖೆ<br>ನೃಪತುಂಗ ರಸ್ತೆ ಬೆಂಗಳೂರು | **ಶ್ರೀಮತಿ ಡಾ. ಕೆ. ವಿದ್ಯಾಕುಮಾರಿ** ಭಾ.ಆ.ಸೇ<br>ರಾಜ್ಯ ಯೋಜನಾ ನಿರ್ದೇಶಕರು<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು |
| **ಶ್ರೀ ಮಾರುತಿ ಎಂ.ಆರ್.**<br>ನಿರ್ದೇಶಕರು, ಗುಣಮಟ್ಟ<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು | **ಶ್ರೀ ಹೆಚ್.ಎನ್. ಗೋಪಾಲಕೃಷ್ಣ**<br>ನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ<br>ಬೆಂಗಳೂರು | **ಶ್ರೀ ಸಿ.ಆರ್. ನಾಗರಾಜಯ್ಯ**<br>ಪ್ರಾಂಶುಪಾಲರು ಹಾಗೂ<br>ಉಪನಿರ್ದೇಶಕರು (ಅಭಿವೃದ್ಧಿ)<br>ಡಯಟ್ ಮೈಸೂರು |

## ಸಹಕಾರ

| | |
|---|---|
| **ಶ್ರೀ ಬಿ.ಎಸ್. ಜಗದೀಶ್ವರ**<br>ಸಹನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು | **ಶ್ರೀಮತಿ ಮಂಗಳ ಜಿ.**<br>ಉಪನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು |

## ಸಂಪನ್ಮೂಲ ರಚನಾ ತಂಡ (2024–2025)

| | |
|---|---|
| **ಶ್ರೀ ಮಹದೇವಪ್ರಸಾದ್ ಹೆಚ್.ವಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಪುಟ್ಟೇಗೌಡನಹುಂಡಿ,<br>ಮೈಸೂರು ಗ್ರಾಮಾಂತರ, ಮೈಸೂರು ಜಿಲ್ಲೆ. | **ಶ್ರೀ ಮಹೇಂದ್ರಕುಮಾರ್. ಸಿ**<br>ಸಹ ಶಿಕ್ಷಕರು, ಸ.ಪ.ಪೂ.ಕಾಲೇಜು (ಪ್ರೌಢಶಾಲಾ ವಿಭಾಗ),<br>ಸಂತೆಮಾಳ, ಬನ್ನೂರು, ಟಿ.ನರಸೀಪುರ ತಾ॥, ಮೈಸೂರು ಜಿಲ್ಲೆ. |

| | | |
|---|---|---|
| **ಶ್ರೀಮತಿ ಸುಧಾ.ಸಿ.ಎಸ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ನಾಗನಹಳ್ಳಿ, ಮೈಸೂರು ಗ್ರಾಮಾಂತರ,<br>ಮೈಸೂರು ಜಿಲ್ಲೆ. | **ಶ್ರೀಮತಿ ಸುಮ.ಟಿ.ಪಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಮೇಟಗಳ್ಳಿ, ಮೈಸೂರು ಗ್ರಾಮಾಂತರ,<br>ಮೈಸೂರು ಜಿಲ್ಲೆ. | **ಶ್ರೀ ತೀರ್ಥಕುಮಾರ್. ಎಂ. ಎನ್**<br>ಸಹ ಶಿಕ್ಷಕರು ಸ.ಹಿ.ಪ್ರಾ. ಶಾಲೆ ಯಮಗುಂಭ<br>ಹುಣಸೂರು ತಾಲ್ಲೂಕು<br>ಮೈಸೂರು ಜಿಲ್ಲೆ |
| **ಶ್ರೀ ಮಾದೇಶ.ಎಂ**<br>ಪದವೀಧರ ಪ್ರಾಥಮಿಕ ಶಿಕ್ಷಕರು<br>ಸ.ಹಿ.ಪ್ರಾ.ಶಾಲೆ, ಹಿನಕಲ್,<br>ಮೈಸೂರು ಗ್ರಾಮಾಂತರ, ಮೈಸೂರು ಜಿಲ್ಲೆ. | **ಶ್ರೀ ಸಿದ್ಧರಾಜು.ಡಿ**<br>ಪದವೀಧರ ಪ್ರಾಥಮಿಕ ಶಿಕ್ಷಕರು,<br>ಸ.ಹಿ.ಪ್ರಾ.ಶಾಲೆ, ಯಡದೊರೆ,<br>ಟಿ.ನರಸೀಪುರ ತಾ॥, ಮೈಸೂರು ಜಿಲ್ಲೆ. | **ಶ್ರೀ ಮಹೇಶ್ ಶೆಟ್ಟಿ**<br>ಪದವೀಧರ ಪ್ರಾಥಮಿಕ ಶಿಕ್ಷಕರು,<br>ಸ.ಹಿ.ಪ್ರಾ.ಶಾಲೆ, ವಾಜಮಂಗಲ,<br>ಮೈಸೂರು ಗ್ರಾಮಾಂತರ, ಮೈಸೂರು ಜಿಲ್ಲೆ. |

## ಸಂಪನ್ಮೂಲ ಪರಿಷ್ಕರಣ ತಂಡ (2026–2027)

| | |
|---|---|
| **ಶ್ರೀ ಆರ್.ಡಿ.ರವೀಂದ್ರ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಲೋಕನಾಥಪುರ,<br>ಕೊಪ್ಪ ತಾ॥, ಚಿಕ್ಕಮಗಳೂರು ಜಿಲ್ಲೆ. | **ಶ್ರೀ ಮಾದೇಶ.ಎಂ**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಸ.ಹಿ.ಪ್ರಾ.ಶಾಲೆ,<br>ಹಿನಕಲ್, ಮೈಸೂರು ಗ್ರಾಮಾಂತರ, ಮೈಸೂರು ಜಿಲ್ಲೆ. |
| **ಶ್ರೀ ಸಿದ್ಧರಾಜು.ಡಿ**<br>ಪದವೀಧರ ಪ್ರಾಥಮಿಕ ಶಿಕ್ಷಕರು,<br>ಸ.ಹಿ.ಪ್ರಾ.ಶಾಲೆ, ಯಡದೊರೆ, ಟಿ.ನರಸೀಪುರ ತಾ॥, ಮೈಸೂರು ಜಿಲ್ಲೆ. | **ಶ್ರೀ ಸಿದ್ಧರಾಜು.ಎಸ್**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಕೂಡಾಪ್ಪುರ,<br>ನಂಜನಗೂಡು ತಾ॥, ಮೈಸೂರು ಜಿಲ್ಲೆ. |

## ಸಮನ್ವಯ

- **ಶ್ರೀಮತಿ ನಾಗಮಣಿ ಎಂ.** ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು
- **ಶ್ರೀಮತಿ ಶಿವಮ್ಮ,** ಹಿರಿಯ ಸಹಾಯಕ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಕರ್ನಾಟಕ.
- **ಶ್ರೀ ಕೆ.ವಿ.ಸುರೇಶ್,** ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀಮತಿ ಬಿ.ಎನ್.ನಳಿನಾಕ್ಷಿ,** ಉಪನ್ಯಾಸಕರು, ಕಾರ್ಯಾನುಭವ ವಿಭಾಗ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀ ಶಿವಶಂಕರಯ್ಯ,** ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.

**ಬೆಂಬಲ ಟ್ರಾನ್ಸ್ ಫಾರ್ಮ್ ಸ್ಕೂಲ್ಸ್,**

©KTBS NOT TO BE REPUBLISHED

# ಮುನ್ನುಡಿ

ವಿದ್ಯಾರ್ಥಿಗಳು ಆಲೋಚನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ, ತಮ್ಮ ತಿಳುವಳಿಕೆಯನ್ನು ವಿಶ್ಲೇಷಿಸಿದಾಗ ಮತ್ತು ಹೊಸ ಪರಿಕಲ್ಪನೆಗಳನ್ನು ತಮ್ಮಲ್ಲಿನ ಪೂರ್ವಜ್ಞಾನದೊಂದಿಗೆ ಜೋಡಿಸಿಕೊಂಡಾಗ ಮಾತ್ರ ಕಲಿಕೆಯು ಅರ್ಥಪೂರ್ಣವಾಗುತ್ತದೆ. ಇದನ್ನು ಮನಗಂಡು, **'ಮರುಸಿಂಚನ'** ಕಾರ್ಯಕ್ರಮವು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಅನುಭವ ಆಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಿದೆ. ಈ ಕಾರ್ಯಕ್ರಮವನ್ನು ವಿಶೇಷವಾಗಿ ಕಲಿಕಾ ಅಂತರಗಳನ್ನು **(learning gaps)** ಇಲ್ಲವಾಗಿಸಲು ಹಾಗೂ ವಿದ್ಯಾರ್ಥಿಗಳು ತಮ್ಮ ತರಗತಿಗೆ ಅನುಗುಣವಾದ ಕಲಿಕಾ ಮಟ್ಟವನ್ನು ತಲುಪಲು ಅತ್ಯಗತ್ಯವಾದ ಬುನಾದಿ **(foundational)** ಮತ್ತು ಪೂರ್ವ–ಅಗತ್ಯ (ಠಿಡಿಜಡಿಜಡಣುಣಜ) ಸಾಮರ್ಥ್ಯಗಳಲ್ಲಿ ಪ್ರಾವೀಣ್ಯತೆ ಸಾಧಿಸಲು ಅನುವಾಗುವಂತೆ ರೂಪಿಸಲಾಗಿದೆ.

ಈ ದೂರ ದೃಷ್ಟಿಯನ್ನು ಸಾಕಾರಗೊಳಿಸಲು **'ವಿದ್ಯಾರ್ಥಿ ಅಭ್ಯಾಸ ಪುಸ್ತಕ' (Student Activity Book - SAB)** ವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ವಿದ್ಯಾರ್ಥಿಗಳಿಗೆ ಒಂದು ವ್ಯವಸ್ಥಿತ ಕಲಿಕಾ ಸಂಗಾತಿಯಾಗಿ ಕಾರ್ಯ ನಿರ್ವಹಿಸುತ್ತದೆ; ವಿದ್ಯಾರ್ಥಿಗಳು ತಮ್ಮ ಪೂರ್ವ–ಅಗತ್ಯ ಪರಿಕಲ್ಪನೆಗಳನ್ನು ಪುನರ್ಮನನ ಮಾಡಿಕೊಳ್ಳಲು, ಮಾರ್ಗದರ್ಶಿತ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ತರಗತಿವಾರು ಪಾಠಗಳ ಬಗ್ಗೆ ತಮ್ಮ ತಿಳುವಳಿಕೆಯನ್ನು ದೃಢೀಕರಿಸಿಕೊಳ್ಳಲು ಇದು ಸಹಕಾರಿಯಾಗಲಿದೆ.

ಈ ಪುಸ್ತಕದಲ್ಲಿ ಅಳವಡಿಸಲಾಗಿರುವ ಚಟುವಟಿಕೆಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ರೂಪಿಸಲಾಗಿದೆ :

- ವಿದ್ಯಾರ್ಥಿಗಳಲ್ಲಿನ ಕಲಿಕಾ ನ್ಯೂನತೆಗಳನ್ನು ಸರಿದೂಗಿಸಿ ಸಮನ್ವಯಗೊಳಿಸುವುದು.
- ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ, ಚರ್ಚೆ ಮತ್ತು ಸಮಸ್ಯೆಪರಿಹರಿಸುವ ಕೌಶಲಗಳನ್ನು ಉತ್ತೇಜಿಸುವುದು.
- ತರಗತಿವಾರು ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳ ಕಡೆಗೆ ಹಂತ ಹಂತವಾಗಿ ಪ್ರಗತಿ ಸಾಧಿಸಲು ಬೆಂಬಲ ನೀಡುವುದು.

ಈ **ವಿದ್ಯಾರ್ಥಿ ಅಭ್ಯಾಸ ಪುಸ್ತಕವು** ಕೇವಲ ಪರೀಕ್ಷಾ ಅಭ್ಯಾಸ ಪುಸ್ತಕವಲ್ಲ ಅಥವಾ ಹೆಚ್ಚುವರಿ ಪಠ್ಯ ಪುಸ್ತಕವೂ ಅಲ್ಲ. ಇದನ್ನು ದೈನಂದಿನ ಕಲಿಕಾ ಪ್ರಕ್ರಿಯೆಯ ಭಾಗವಾಗಿ, ಶಿಕ್ಷಕರ ಮಾರ್ಗದರ್ಶನದಲ್ಲಿ, ಸಾಮಾನ್ಯ ತರಗತಿ ಬೋಧನೆಯ ಸಮಯದಲ್ಲಿ ಬಳಸಲು ರೂಪಿಸಲಾಗಿದೆ. ಪಠ್ಯಪುಸ್ತಕದ ಪಾಠಗಳಿಗೆ ಪೂರಕವಾಗಿರುವ ಮತ್ತು ಕ್ರಮಬದ್ಧವಾಗಿ ಜೋಡಿಸಲಾದ ಚಟುವಟಿಕೆಗಳ ಮೂಲಕ, ಸಿದ್ಧತೆಯಿಂದ ಹಿಡಿದು ಕಲಿಕೆಯ ದೃಢೀಕರಣದವರೆಗಿನ ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳಿಗೆ ಇದು ನೆರವು ನೀಡುತ್ತದೆ.

ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ಸಕ್ರಿಯವಾಗಿ ಕಲಿಯಲು, ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು, ಸಹಪಾಠಿಗಳಿಂದ ಕಲಿಯಲು ಮತ್ತು ವಿಷಯದ ಬಗ್ಗೆ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಪ್ರೇರೇಪಿತರಾಗುತ್ತಾರೆ.

ಶಿಕ್ಷಕರ ಆಪ್ತ ಮಾರ್ಗದರ್ಶನದೊಂದಿಗೆ ಈ ವಿದ್ಯಾರ್ಥಿ ಅಭ್ಯಾಸ ಪುಸ್ತಕದ ನಿರಂತರ ಬಳಕೆಯು ವಿದ್ಯಾರ್ಥಿಗಳ ಪರಿಕಲ್ಪನಾ ತಿಳುವಳಿಕೆಯನ್ನು ಬಲಪಡಿಸುತ್ತದೆ, ಕಲಿಕಾಫಲಗಳನ್ನು ಸುಧಾರಿಸುತ್ತದೆ ಮತ್ತು ತರಗತಿಗಳಲ್ಲಿ ಆನಂದದಾಯಕ ಕಲಿಕಾ ವಾತಾವರಣವನ್ನು ನಿರ್ಮಿಸುತ್ತದೆ ಎಂದು ನಾವು ನಂಬಿದ್ದೇವೆ.

ಈ ಪುಸ್ತಕವು ವಿದ್ಯಾರ್ಥಿಗಳ ಕಲಿಕಾ ಪಯಣದಲ್ಲಿ ಅವರ ಕುತೂಹಲ, ಪಾಲ್ಗೊಳ್ಳುವಿಕೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲಿ ಎಂದು ನಾವು ಆಶಿಸುತ್ತೇವೆ.

ಈ ಸಾಹಿತ್ಯ ರಚನೆಯಲ್ಲಿ ಭಾಗವಹಿಸಿದ ಎಲ್ಲಾ ಸಂಪನ್ಮೂಲವ್ಯಕ್ತಿಗಳಿಗೂ, ಅಧಿಕಾರಿ ಬಂಧುಗಳಿಗೂ ಧನ್ಯವಾದಗಳು.

@KTBS NOT TO BE REPUBLISHED

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

## ಬುನಾದಿ ಹಂತ


| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
|---|---|---|
| 01 | ವರ್ಣಮಾಲೆ ಗುಣಿತಾಕ್ಷರ | 01 |
| 02 | ಒತ್ತಕ್ಷರ ತಿಳಿಯೋಣ | 03 |
| 03 | ವಾಕ್ಯ ಗುರುತಿಸೋಣ | 04 |
| 04 | ವಾಕ್ಯ ರಚಿಸೋಣ | 05 |
| 05 | ವಿರುದ್ಧಾರ್ಥಕ ಪದ, ಕ್ರಿಯಾಪದಗಳನ್ನು ಗುರುತಿಸೋಣ | 07 |
| 06 | ಶಬ್ದಕೋಶ ತೆರೆಯೋಣ | 09 |
| 07 | ಶಬ್ದಾರ್ಥ ತಿಳಿಯೋಣ – ಸಮಾನಾರ್ಥಕ ಪದ ಕಲಿಯೋಣ | 11 |
| 08 | ಲೇಖನ ಚಿಹ್ನೆ ತಿಳಿಯೋಣ, ಅರ್ಥವತ್ತಾಗಿ ಓದೋಣ | 12 |
| 09 | ವಚನ ಪ್ರಕಾರ ತಿಳಿಯೋಣ | 14 |
| 10 | ಲಿಂಗ, ವಚನಗಳನ್ನು ಅರಿಯೋಣ | 15 |
| 11 | ಪತ್ರಿಕೆ ಓದೋಣ | 17 |
| 12 | ಓದೋಣ, ನೋಡಿ ಬರೆಯೋಣ | 19 |
| 13 | ಜ್ಞಾಪಿಸಿ ಬರೆಯೋಣ | 21 |
| 14 | ಕವನ ರಚಿಸಿ ಓದೋಣ | 22 |
| 15 | ಶೀರ್ಷಿಕೆ ಬರೆಯೋಣ | 24 |
| 16 | ಗಾದೆ ಪೂರ್ಣಗೊಳಿಸೋಣ – ಗಾದೆ ಹೆಸರು ಅರಿಯೋಣ | 25 |
| 17 | ಒಗಟು ಬಿಡಿಸೋಣ | 26 |
| 18 | ಪ್ರಾಸ ಅರಿಯೋಣ –ಪದ ಬರೆಯೋಣ | 28 |
| 19 | ಚಿತ್ರಕಥೆ | 29 |
| 20 | ಫಲಕ ನೋಡಿ ಪಾಲಿಸು | 31 |
| 21 | ಘಟನೆಯನ್ನು ಅರಿಯೋಣ | 33 |
| 22 | ಘಟನೆ ಅರಿತು ನಡೆಯೋಣ | 36 |
| 23 | ಕಥೆ ಕಥೆ ಚಿತ್ರಕಥೆ | 38 |
| 24 | ಊಹಿಸಿ ಬರೆಯೋಣ | 40 |


@KTBS NOT TO BE REPUBLISHED

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


| ಬೆಂಬಲಿತ ಕಲಿಕೆಯ ಹಂತ | | |
|---|---|---|
| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
| 01 | ಘಟನೆ ಕುರಿತು ಮಾತನಾಡೋಣ | 41 |
| 02 | ಕಥೆ ಹೇಳೋಣ ಬನ್ನಿ | 44 |
| 03 | ಧ್ವನಿ ಗುರುತಿಸೋಣ, ವ್ಯತ್ಯಾಸ ತಿಳಿಯೋಣ. | 47 |
| 04 | ಪದಗಳನ್ನು ಓದಿ ಗ್ರಹಿಸೋಣ | 48 |
| 05 | ಸೂಚನೆ ಅರಿಯೋಣ, ಪತ್ರದ ನಿಯಮ ತಿಳಿಯೋಣ | 50 |
| 06 | ಕಥೆ ಕಟ್ಟೋಣ | 52 |
| 07 | ಸಾರಾಂಶ ಬರೆಯೋಣ | 54 |
| 08 | ವೃತ್ತ ಪತ್ರಿಕೆ ಓದೋಣ, ಅನಿಸಿಕೆ ಬರೆಯೋಣ | 56 |
| 09 | ನುಡಿಗಟ್ಟುಗಳನ್ನು ಬಳಸೋಣ | 58 |
| 10 | ನಾಟಕ ಓದಿ ಗ್ರಹಿಸೋಣ | 60 |
| 11 | ಅನುಭವಗಳನ್ನು ಬರೆಯೋಣ | 62 |
| 12 | ಪದ ಬಿಡಿಸೋಣ, ಸಂಧಿ ಹೆಸರಿಸೋಣ | 64 |
| 13 | ಸುದ್ದಿ ಮಾಧ್ಯಮ ನೋಡೋಣ, ಅನಿಸಿಕೆ ಬರೆಯೋಣ | 65 |
| 14 | ಅನುಭವ ಹಂಚಿಕೊಳ್ಳೋಣ | 66 |
| 15 | ಕಥೆ ರಚಿಸೋಣ ಬನ್ನಿ | 68 |
| 16 | ಜನಪದ ಕಥೆ ಕಟ್ಟೋಣ | 70 |
| 17 | ಸಂಭಾಷಣೆ ಗ್ರಹಿಸೋಣ | 71 |
| 18 | ನೋಡೋಣ– ತಿಳಿಯೋಣ | 73 |
| 19 | ಚಿತ್ರನೋಡಿ ಚರ್ಚಿಸೋಣ | 75 |
| 20 | ವೃತ್ತ ಪತ್ರಿಕೆ ಓದೋಣ | 79 |
| 21 | ಪ್ರಾಸ ಗುರುತಿಸೋಣ | 81 |
| 22 | ಕವಿತೆ ಓದೋಣ ಗ್ರಹಿಸೋಣ | 83 |
| 23 | ಪತ್ರ ಬರೆಯೋಣ | 85 |
| 24 | ಲೇಖನ ಓದಿ ಉತ್ತರಿಸೋಣ | 88 |
| 25 | ಆಟದ ನಿಯಮ ತಿಳಿಯೋಣ | 90 |
| 26 | ವೃತ್ತಿಗಳನ್ನು ತಿಳಿಯೋಣ, ವೃತ್ತಿ ನಿರತರನ್ನು ಗೌರವಿಸೋಣ | 91 |
| 27 | ಪ್ರಬಂಧ ಬರೆಯೋಣ | 95 |
| 28 | ವಾಕ್ಯ ಪ್ರಬೇಧ ತಿಳಿಯೋಣ, ಬರೆಯೋಣ | 98 |


©KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 1

# ವರ್ಣಮಾಲೆ ಗುಣಿತಾಕ್ಷರ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** 'ಅಕ್ಷರ, ಪದ, ಸರಳ ವಾಕ್ಯಗಳನ್ನು ಸರಿಯಾದ ಗಾತ್ರ, ಅಂತರದೊಂದಿಗೆ ಬರೆಯುವರು ಮತ್ತು ಓದುವರು. ಶಾಲೆಯ ಒಳಗೆ ಮತ್ತು ಹೊರಗೆ ಇರುವ ಓದುವ ಮೂಲೆ, ಗ್ರಂಥಾಲಯ ಮುಂತಾದ ಕಡೆ ತನಗೆ ಇಷ್ಟವಾದ ಪುಸ್ತಕಗಳನ್ನು ಗುರುತಿಸಿ, ಆಯ್ದು ಓದುವ ಪ್ರಯತ್ನ ನಡೆಸುವರು'

**ಚಟುವಟಿಕೆ 1 :** ಖಾಲಿ ಬಿಟ್ಟಿರುವ ವರ್ಣಮಾಲೆಗಳನ್ನು ಪೂರ್ಣಗೊಳಿಸಿರಿ.

| | | | | | | |
|---|---|---|---|---|---|---|
| ಅ | | | ಈ | | | |

| | | | | | | | |
|---|---|---|---|---|---|---|---|
| | | | | | ಔ | ಅಂ | |

| | | | | |
|---|---|---|---|---|
| ಕ | | | | ಙ |
| | | | ಝ | |
| ಟ | | | | |
| | | | | ನ |
| ಪ | | ಬ | | |

| | | | | | | | | |
|---|---|---|---|---|---|---|---|---|
| ಯ | | | ವ | | | ಸ | | ಳ |

@KTBS NOT TO BE REPUBLISHED

**ಚಟುವಟಿಕೆ 2 :** ಮೇಲ್ಕಂಡ ಪಟ್ಟಿಯಲ್ಲಿರುವ ವರ್ಣಮಾಲೆಗಳನ್ನು ಬಳಸಿ ಎರಡಕ್ಷರ, ಮೂರಕ್ಷರ ಹಾಗೂ ನಾಲ್ಕಕ್ಷರದ ಪದ ಬರೆಯಿರಿ.

ಮಾದರಿ – ರಸ, ಕದನ, ಅವಸರ

**ಚಟುವಟಿಕೆ 3 :** ಕೊಟ್ಟಿರುವ ಗುಣಿತಾಕ್ಷರ ಬಳಸಿಕೊಂಡು ಎರಡಕ್ಷರ, ಮೂರಕ್ಷರ ಪದ ಬರೆಯಿರಿ.

| | | | | |
|---|---|---|---|---|
| ಕೊ | ಗೌ | ಧ | ಸು | ಚಾ |
| ಪಾ | ಡ | ಗು | ನ | ಮೀ |
| ಲೀ | ರ | ವ | ಸು | ಕೋ |
| ಗು | ತೋ | ಣ | ಕೃ | ಷ |
| ಳಿ | ಹೊ | ತಿ | ಧಿ | ಔ |
| ಜ | ಶಾ | ನಿ | ವೈ | ಸ |

@KTBS NOT TO BE REPUBLISHED

ಮಾದರಿ – ಕೋಳಿ ______ ತೋರಣ ______

______ ______

______ ______

______ ______

______ ______

______ ______

______ ______

______ ______

## ಬುನಾದಿ ಹಂತ – ಚಟುವಟಿಕೆ ಹಾಳೆ 2

# ಒತ್ತಕ್ಷರ ತಿಳಿಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** " ವಿರಳವಾಗಿ ಉಪಯೋಗಿಸುವ ಅಕ್ಷರ ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರುತಿಸಿ ಓದುವರು, ಬರೆಯುವರು ಮತ್ತು ಅಕ್ಷರ ಧ್ವನಿ ಸಂಬಂಧಿಕರಿಸಿ ಪ್ರಯೋಗ ಮಾಡಲು ಪ್ರಯತ್ನಿಸುವರು. ಅಕ್ಷರಮಾಲೆಯ ಅಕ್ಷರಗಳನ್ನು ಮತ್ತು ಅವುಗಳ ಧ್ವನಿಗಳನ್ನು ಗುರುತಿಸುವರು ".

**ಚಟುವಟಿಕೆ 1 : ಕೊಟ್ಟಿರುವ ಒತ್ತಕ್ಷರಗಳನ್ನು ಬಳಸಿ ಪದ ರಚಿಸಿ.**

**ಮಾದರಿ : ಅಮ್ಮ**




ಮಾದರಿ : ಅಕ್ಕ




@KTBS
NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ಒತ್ತಕ್ಷರ ಪದಗಳನ್ನು ಸಜಾತಿ , ವಿಜಾತಿ ಪದಗಳಾಗಿ ವಿಂಗಡಿಸಿ ಬರೆಯಿರಿ.**

**ರತ್ನ ,ರನ್ನ, ಮುನ್ನ, ಪಕ್ಷ , ಅಚ್ಚು, ಮತ್ತು , ಶಿಕ್ಷೆ, ಅಕ್ಷರ**

| ಸಜಾತಿ ಒತ್ತಕ್ಷರ ಪದಗಳು | ವಿಜಾತಿ ಒತ್ತಕ್ಷರ ಪದಗಳು |
|---|---|
| | |
| | |
| | |
| | |

## ಬುನಾದಿ ಹಂತ – ಚಟುವಟಿಕೆ ಹಾಳೆ 3

# ವಾಕ್ಯ ಗುರುತಿಸೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ಶಾಲೆಯ ಒಳಗೆ ಮತ್ತು ಹೊರಗೆ ಗ್ರಂಥಾಲಯದಿಂದ ತಮಗೆ ಇಷ್ಟವಾದ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು ಓದುವ ಪ್ರಯತ್ನ ಮಾಡುವರು. ತಮ್ಮ ಆಲೋಚನೆಗಳನ್ನು ವಾಕ್ಯ, ಶಬ್ದಗಳ ಮೂಲಕ ಬರೆಯುವರು."

**ಚಟುವಟಿಕೆ 1 :** ನೀಡಿರುವ ಪದಗಳನ್ನು ಬಳಸಿ ಕರ್ತೃ, ಕರ್ಮ, ಕ್ರಿಯಾ ಪದಗಳೊಂದಿಗೆ ಪೂರ್ಣ ವಾಕ್ಯ ರಚಿಸಿರಿ
ಮಾದರಿ : ಆಟ – ಮಾದೇಶನು ಆಟವನ್ನು ಆಡಿದನು.

1. ಪುಸ್ತಕ :
2. ಹಣ್ಣು :
3. ಹುಲಿ :
4. ಕಾವೇರಿ :
5. ರಾಜು :

**ಚಟುವಟಿಕೆ 2 :** ಕೊಟ್ಟಿರುವ ಕಥೆ ಭಾಗವನ್ನು ಅರ್ಥ ಪೂರ್ಣವಾಗಿ ಓದಿ ಕೆಳಗೆ ನೀಡಿರುವ ಜಾಗದಲ್ಲಿ ವಾಕ್ಯಗಳನ್ನು ಬರೆಯಿರಿ.

@KTBS NOT TO BE REPUBLISHED

### ಚಂದ್ರನಿಗೆ ಶಾಪ

ಒಮ್ಮೆ ಗಣೇಶ ಇಲಿಯ ಮೇಲೆ ಸಂಚಾರ ಮಾಡುತ್ತಾ ಚಂದ್ರಲೋಕಕ್ಕೆ ಬರುತ್ತಾನೆ. ಚಂದ್ರನೋ ಸರ್ವಾಂಗ ಸುಂದರ. ಆವನಿಗೆ ತನ್ನ ಸೌಂದರ್ಯದ ಮೇಲೆ ಅಪಾರ ಮಮತೆ. ವಿಕಟರೂಪವನಾದ ಗಣಪನನ್ನು ಕಂಡು ಅಪಹಾಸ್ಯ ಮಾಡುತ್ತಾನೆ. ಜೋರಾಗಿ ನಗುತ್ತಾನೆ. ಗಣಪನಿಗೆ ಅಪಮಾನವಾಗುತ್ತದೆ. ಚಂದ್ರನಿಗೆ ಹೀಗೆ ಶಾಪ ನೀಡುತ್ತಾನೆ. 'ಎಲೈ ಚಂದ್ರ ನೀನು ಸೌಂದರ್ಯ ಮದದಿಂದ ಬೀಗುತ್ತಿದ್ದೀಯಾ.



ಮೂರ್ಖ! ಅದಕ್ಕೆ ತಕ್ಕ ಫಲವನ್ನು ಅನುಭವಿಸು. ನಿನ್ನೆಲ್ಲಾ ಗರ್ವ, ಅಹಂಕ್ಕೆ ಕಾರಣವಾದ ಸೌಂದರ್ಯ ಕುಂದಿ ಹೋಗಲಿ. ಭಾದ್ರಪದ ಶುದ್ಧ ಚೌತಿಯಂದು ನಿನ್ನನ್ನು ನೋಡುವವರು ಅಪವಾದಕ್ಕೆ ಗುರಿಯಾಗಲಿ!' ಎಂದು ಶಪಿಸುತ್ತಾನೆ. ಶಾಪಗ್ರಸ್ತನಾದ ಕೂಡಲೇ ಚಂದ್ರನ ಅಹಂಕಾರ ಇಳಿದು ಹೋಗುತ್ತದೆ. ಆವನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಗಣೇಶನ ಮುಂದೆ ಭಯ-ಭಕ್ತಿಗಳಿಂದ ಕೈಮುಗಿದು ನಿಂತು, 'ಸ್ವಾಮಿ, ನನ್ನ ಅಜ್ಞಾನವನ್ನು ಕ್ಷಮಿಸಿಬಿಡು ನನಗೆ ಕೊಟ್ಟ ಶಾಪವನ್ನು ಹಿಂತೆಗೆದುಕೊಂಡು ಉದ್ಧರಿಸು" ಎಂದು ಬೇಡಿಕೊಳ್ಳುತ್ತಾನೆ.

ಗಣೇಶ ಚಂದ್ರನನ್ನು ಕ್ಷಮಿಸುತ್ತಾನೆ. 'ಚೌತಿಯ ದಿನ ನಿನ್ನನ್ನು ನೋಡಿ ಮಿಥ್ಯಾಪವಾದಕ್ಕೆ ಗುರಿಯಾದವರು ಶುದ್ಧ ಬಿದಿಗೆಯ ದಿನ ನಿನ್ನ ದರ್ಶನ ಮಾಡಿದರೆ ಅಥವಾ ಸ್ಯಮಂತಕ ಮಣಿಯ ಕಥೆಯನ್ನು ಕೇಳಿದರೆ ಅಂಥವರು ಅಪವಾದದಿಂದ ಮುಕ್ತರಾಗಲಿ' ಎಂದು ಹೇಳುತ್ತಾನೆ.

## ಬುನಾದಿ ಹಂತ – ಚಟುವಟಿಕೆ ಹಾಳೆ 4

# ವಾಕ್ಯ ರಚಿಸೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ಮುದ್ರಿತ ಸಾಮಗ್ರಿಯಲ್ಲಿ ಅಕ್ಷರ, ಶಬ್ದ, ವಾಕ್ಯಗಳ ಅರ್ಥವನ್ನು ತಿಳಿಯುವರು, ಹೇಳುವರು ಮತ್ತು ಬರೆಯುವರು."

## "ಪದ ಅರಿಯೋಣ –ವಾಕ್ಯ ಮಾಡೋಣ"

**ಚಟುವಟಿಕೆ 1 :** ಕೊಟ್ಟಿರುವ ಪದಗಳನ್ನು ಬಳಸಿ ವಾಕ್ಯವನ್ನು ರಚಿಸಿ.
(ದಯೆ, ಕಾಡು, ನೀರು, ಸಕಲ, ಪ್ರಾಣಿ, ಉಳಿಸಿರಿ, ಉಳಿಯಿರಿ, ದುರ್ಬಳಕೆ, ಕಲುಷಿತ.)



@KTBS NOT TO BE REPUBLISHED

**ಚಟುವಟಿಕೆ 2 :** ಹೊಸ ಪದಗಳಿಗೆ ಅರ್ಥ ಹುಡುಕಿ ಬರೆಯಿರಿ.

- ಅಮೂಲ್ಯ = ____________________
- ಕಾಡು = ____________________
- ನೀರು = ____________________
- ದಯೆ = ____________________
- ದುರ್ಬಳಕೆ = ____________________

**ಚಟುವಟಿಕೆ 3 :** ಕೊಟ್ಟಿರುವ ವಾಕ್ಯಗಳನ್ನು ಓದಿ ಖಾಲಿ ಜಾಗದಲ್ಲಿ ನಕಲಿಸಿ ಬರೆಯಿರಿ. ನಂತರ ನಿಮಗೆ ತಿಳಿದಿರುವ 3 ಶುಭನುಡಿಗಳನ್ನು ಬರೆಯಿರಿ.

1. "ಇತರರ ಮಾತುಗಳಿಗೂ ಮನ್ನಣೆ ಕೊಡಿ".

   ________________________________

2. "ಸಂಪನ್ಮೂಲಗಳನ್ನು ಅಗತ್ಯವಿದ್ದಷ್ಟು ಮಾತ್ರಬಳಸಿರಿ".

   ________________________________

3. "ವನಗಳನ್ನು ಬೆಳಸಿರಿ, ವನ್ಯಜೀವಿಗಳನ್ನು ಉಳಿಸಿರಿ."

   ________________________________

1. ________________________________
2. ________________________________
3. ________________________________

**ಚಟುವಟಿಕೆ 4 :** ಕೊಟ್ಟಿರುವ ಚಿತ್ರಕ್ಕೆ ಸರಿಹೊಂದುವ ವಾಕ್ಯಗಳನ್ನು ಆರಿಸಿ ಬರೆಯಿರಿ.










@KTBS
NOT TO BE REPUBLISHED

1. ಹಂಚಿ ತಿನ್ನೋಣ ಒಟ್ಟಿಗೆ ಬಾಳೋಣ
2. ಎಲ್ಲರೊಂದಿಗೆ ಸ್ನೇಹಮಯವಾಗಿರಿ. ಸುಖ ಸಂತೋಷದಿಂದ ಬಾಳಿರಿ.
3. ಉಡುಗೊರೆ ಪಡೆಯಿರಿ ಧನ್ಯವಾದ ತಿಳಿಸಿರಿ.
4. ಮಾಹಿತಿ ಅರಿಯೋಣ ಜಾಗೃತಿ ಮೂಡಿಸೋಣ.
5. ಗುರುಗಳನ್ನು ಗೌರವಿಸಿ ಮಾರ್ಗದರ್ಶನ ಸ್ವೀಕರಿಸಿ.

ಬುನಾದಿ ಹಂತ – ಚಟುವಟಿಕೆ ಹಾಳೆ 5

# ವಿರುದ್ಧಾರ್ಥಕ ಪದ, ಕ್ರಿಯಾಪದಗಳನ್ನು ಗುರುತಿಸೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** " ಭಾಷಾ ವ್ಯಾಕರಣದ ಅಂಗಗಳನ್ನು (ಉದಾ: ಲೇಖನಚಿಹ್ನೆಗಳು, ಕ್ರಿಯಾಪದ, ಕಾಲ, ವಿರುದ್ಧಾರ್ಥಕ ಪದಗಳು) ಗುರುತಿಸಿ, ಸೂಕ್ತವಾಗಿ ಉಪಯೋಗಿಸಿ ಬರೆಯುವರು."

**ಚಟುವಟಿಕೆ 1 :** ವಿರುದ್ಧಾರ್ಥಕ ಪದಗಳನ್ನು ಆಯ್ದು ಜೋಡಿಸಿ ಬರೆಯಿರಿ

**ಸ್ವದೇಶಿ, ಅನನುಕೂಲ, ವಿಷ, ಅಮೃತ, ಏಕ, ಒಳಗೆ, ವಿದೇಶಿ, ಹೊರಗೆ, ಅನುಕೂಲ, ಅನೇಕ.**

| | | | |
|---|---|---|---|
| 1. | | X | |
| 2. | | X | |
| 3. | | X | |
| 4. | | X | |
| 5. | | X | |

**ಚಟುವಟಿಕೆ 2 :** ಕೊಟ್ಟಿರುವ ಪದಗಳಿಗೆ ಸೂಕ್ತವಾದ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

1. ಸರಳ
2. ಸೋಲು
3. ಹುಟ್ಟು
4. ಆರಂಭ
5. ಸ್ವಾವಲಂಬಿ

@KTBS
NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ವಾಕ್ಯಗಳನ್ನು ಗಮನಿಸಿ, ವಾಕ್ಯಗಳಲ್ಲಿ ಗೆರೆ ಎಳೆದ ಪದಗಳಿಗೆ ವಿರುದ್ಧಾರ್ಥಕ ಪದವನ್ನು ಬರೆದು ವಾಕ್ಯವನ್ನು ರಚಿಸಿರಿ.

1. ವಿಮಾನವು **ಮೇಲೆ** ವೇಗವಾಗಿ ಹಾರುತ್ತದೆ. ____________________
2. ಸೂರ್ಯನು ಭೂಮಿಯಿಂದ **ದೂರ**ದಲ್ಲಿದೆ. ____________________
3. ಆನೆಯು **ದೊಡ್ಡ** ಪ್ರಾಣಿ. ____________________
4. ಜಿರಾಫೆಯು **ಎತ್ತರ**ವಾದ ಪ್ರಾಣಿ. ____________________

**ಚಟುಚಟಿಕೆ 4 :** ಕೊಟ್ಟಿರುವ ವಾಕ್ಯದಲ್ಲಿ ಗೆರೆಎಳೆದ ಪದಗಳು ಯಾವ ಕಾಲದಲ್ಲಿದೆ ಎಂಬುದನ್ನು ಗುರುತಿಸಿ ಬರೆಯಿರಿ.

1. ಸಿದ್ದನು ಮಾರುಕಟ್ಟೆಗೆ **ಹೋದನು.** ____________________
2. ಮಾದೇಶನು ತೋಟದಲ್ಲಿ ಕೆಲಸ **ಮಾಡುತ್ತಿದ್ದಾನೆ.** ____________________
3. ಮಹೇಶನು ಶಿಕ್ಷಕ **ಆಗುವನು.** ____________________
4. ಚಂದನ ಕೋಲಾಟ **ಆಡುವಳು.** ____________________

ಚಟುಚಟಿಕೆ 5 : ಕೊಟ್ಟಿರುವ ಕೋಷ್ಟಕ ಗಮನಿಸಿ ನೀಡಿರುವ ಧಾತುಗಳಿಗೆ ಸೂಕ್ತಕಾಲ ಸೂಚಕ ಪ್ರತ್ಯಯ ಸೇರಿಸಿ ಕ್ರಿಯಾಪದಗಳನ್ನು ಬರೆಯಿರಿ.

**ಮಾದರಿ:**

**ಈಜು** **ಈಜಿದ** **ಈಜುತ್ತಾನೆ** **ಈಜುವನು**

| ಧಾತು | ಭೂತಕಾಲ | ವರ್ತಮಾನ | ಭವಿಷ್ಯತ್ಕಾಲ |
|---|---|---|---|
| ಹಾಡು | | | |
| ಓದು | | | |
| ತಿನ್ನು | | | |
| ದುಡಿ | | | |
| ಮಲಗು | | | |
| ನೋಡು | | | |
| ಬೇಡು | | | |

@KTBS NOT TO BE REPUBLISHED

**ಹೀಗೊಂದು ಕಲಿಕೆ !**

**ಕಾಲಗಳು**

"ನಡೆದ, ನಡೆಯುತ್ತಿರುವ ಮತ್ತು ನಡೆಯುವ ಕ್ರಿಯೆಗಳನ್ನು ಸೂಚಿಸುವುದೇ ಕಾಲಗಳು
ವರ್ತಮಾನ ಕಾಲವು ಕ್ರಿಯೆಯು ಪ್ರಸ್ತುತದಲ್ಲಿ ನಡೆಯುತ್ತಿರುವುದನ್ನು ಸೂಚಿಸುತ್ತದೆ.
ಭೂತಕಾಲವು ಕ್ರಿಯೆಯು ಈ ಹಿಂದೆ ನಡೆದು ಹೋಗಿರುವುದನ್ನು ಸೂಚಿಸುತ್ತದೆ.
ಭವಿಷ್ಯತ್ ಕಾಲವು ಕ್ರಿಯೆಯು ಮುಂದೆ ನಡೆಯುವುದನ್ನು ಸೂಚಿಸುತ್ತದೆ.

ಬುನಾದಿ ಹಂತ - ಚಟುವಟಿಕೆ ಹಾಳೆ 6

## ಶಬ್ದಕೋಶ ತೆರೆಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** "ಹೊಸ ಪದ ಪ್ರಯೋಗಗಳ ಬಗ್ಗೆ ಜಿಜ್ಞಾಸೆ ಮಾಡುವರು ಮತ್ತು ಅವುಗಳ ಅರ್ಥವನ್ನು ಹುಡುಕಲು ಶಬ್ದಕೋಶವನ್ನು ಬಳಸುವರು."

**ಚಟುವಟಿಕೆ 1 :** ಕೊಟ್ಟಿರುವ ಪದಗಳಿಗೆ ಶಬ್ಧಕೋಶದ ಸಹಾಯದಿಂದ ಅರ್ಥ ಹುಡುಕಿ ಬರೆಯಿರಿ.

| | | |
|---|---|---|
| ಮಾದರಿ : | ಬಾನು | ಆಕಾಶ , ಗಗನ |
| | ಇಳೆ | |
| | ಚಳುವಳಿ | |
| | ಸ್ಮರಿಸು | |
| | ಕುಣಿಗೋಲು | |
| | ಪೊರೆ | |
| | ಬೇರೂರು | |
| | ಪೋಷಕ | |
| | ಉಲ್ಲಂಘಿಸು | |
| | ಸಂಭ್ರಮ | |

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು 'ಅ' ಕಾರಾದಿಯಾಗಿ ಜೋಡಿಸಿ ಬರೆಯಿರಿ.

| | | |
|---|---|---|
| ಕುಟುಂಬ | ಹಳ್ಳಿ | ಗೌರವ |
| ಪಟ್ಟಣ | ಆಡಳಿತ | ಇಂಚರ |
| ಸಮರ್ಥ | ಜಾತ್ರೆ | ಮೆರವಣಿಗೆ |
| ಕೋಗಿಲೆ | ಉತ್ಸವ | ಚತುರತೆ |
| ಅಕ್ಷರ | ಮನ್ವಂತರ | ಋಷಿ |

ಮಾದರಿ : ಅಕ್ಷರ

| | |
|---|---|
| 1. | 8. |
| 2. | 9. |
| 3. | 10. |
| 4. | 11. |
| 5. | 12. |
| 6. | 13. |
| 7. | 14. |

@KTBS
NOT TO BE REPUBLISHED

ಬುನಾದಿ ಹಂತ - ಚಟುವಟಿಕೆ ಹಾಳೆ 7

## ಶಬ್ದಾರ್ಥ ತಿಳಿಯೋಣ
## ಸಮನಾರ್ಥಕ ಪದ ಕಲಿಯೋಣ



ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** " ಮುದ್ರಿತ ಸಾಮಗ್ರಿಯಲ್ಲಿ ಅಕ್ಷರ, ಶಬ್ದ, ವಾಕ್ಯಗಳ ಅರ್ಥ ತಿಳಿಯುವರು, ಹೇಳುವರು ಮತ್ತು ಬರೆಯುವರು."

**ಚಟುವಟಿಕೆ 1 :** ಕೊಟ್ಟಿರುವ ಪದಗಳನ್ನು ಓದಿ ಅರ್ಥ ಬರೆಯಿರಿ.

ಮಾದರಿ : ದುಡಿ – ಕೆಲಸ ಮಾಡು

1. ಕಾಪಾಡು : ________________
2. ಚರ್ಚೆ : ________________
3. ಪ್ರಾರಂಭ : ________________
4. ಧ್ವಜ : ________________
5. ಕಡಲು : ________________



**ಚಟುವಟಿಕೆ 2 :** ನೀಡಿರುವ ಚಿತ್ರವನ್ನು ನೋಡಿ, ಹೆಸರು ಬರೆದು,ಆ ಪದಕ್ಕೆ, ಸಮಾನಾರ್ಥಕ ಪದಗಳನ್ನು ರಚಿಸಿ.

  

ಮಾದರಿ : <u>ಅಮ್ಮ– ತಾಯಿ, ಜನನಿ.</u> ________________ ________________

 

________________ ________________

**ಚಟುವಟಿಕೆ 3 :** ಕೊಟ್ಟಿರುವ ಪದಗಳಲ್ಲಿ ಸರಿಯಾದ ಶಬ್ಧರೂಪ ಹೊಂದಿರುವ ಪದಕ್ಕೆ ಗೆರೆ ಎಳೆದು ಬರೆಯಿರಿ.

**ಮಾದರಿ : <u>ಹೆಣ್ಣು</u> – ಎನ್ನು :– ಹೆಣ್ಣು**

1. ತಾಇ – ತಾಯಿ: ________________
2. ಬೆಟ್ವ – ಬೆಟ್ಟ : ________________
3. ವರ – ಒರ : ________________
4. ನಾಇ – ನಾಯಿ : ________________
5. ದಾರಿ – ದಾರೀ : ________________

NOT TO BE REPUBLISHED ©KTBS

ಬುನಾದಿ ಹಂತ – ಚಟುವಟಿಕೆ ಹಾಳೆ 8

# ಲೇಖನ ಚಿಹ್ನೆ ತಿಳಿಯೋಣ
# ಅರ್ಥವತ್ತಾಗಿ ಓದೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಭಿನ್ನ ಉದ್ದೇಶಗಳಿಗಾಗಿ ಬರೆಯುವಲ್ಲಿ ಲೇಖನ ಚಿಹ್ನೆಗಳನ್ನು (ಪೂರ್ಣವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ, ಭಾವಸೂಚಕ, ಉದ್ಧರಣ, ಇತ್ಯಾದಿ) ಸೂಕ್ತವಾಗಿ ಬಳಕೆಮಾಡುವರು.

**ಚಟುವಟಿಕೆ 1 :** ಕೊಟ್ಟಿರುವ ಚಿತ್ರವನ್ನು ಗಮನಿಸಿ ಲೇಖನ ಚಿಹ್ನೆಗಳನ್ನು ಗುರುತಿಸಿ ಬರೆಯಿರಿ.

1. ಪೂರ್ಣ ವಿರಾಮ –
2. ಅರ್ಧ ವಿರಾಮ –
3. ಅಲ್ಪ ವಿರಾಮ –
4. ಉದ್ಧರಣ ಚಿಹ್ನೆ –
5. ವಾಕ್ಯವೇಷ್ಠನ ಚಿಹ್ನೆ –
6. ಆವರಣ ಚಿಹ್ನೆ –
7. ವಿವರಣಾ ಚಿಹ್ನೆ –
8. ಪ್ರಶ್ನಾರ್ಥಕ ಚಿಹ್ನೆ –




**ಚಟುವಟಿಕೆ 2 :** ಕೊಟ್ಟಿರುವ ಕಥೆಯನ್ನು ಓದಿ, ನಕಲುಮಾಡಿ, ಕಥೆಯಲ್ಲಿ ಬರುವ ಲೇಖನ ಚಿಹ್ನೆಗಳು ಮತ್ತು ಹೆಸರುಗಳನ್ನು ಪಟ್ಟಿಮಾಡಿ.




| ಚಿಹ್ನೆಗಳು | ಹೆಸರುಗಳು | ಚಿಹ್ನೆಗಳು | ಹೆಸರುಗಳು |
|---|---|---|---|
| | | | |
| | | | |
| | | | |

@KTBS NOT TO BE REPUBLISHED

**ಚಟುವಟಿಕೆ 3 :** ಈ ಕೆಳಗೆ ಕೊಟ್ಟಿರುವ ಕಥೆಯನ್ನು ಓದಿ, ಕಥೆಗೆ ಕೋಷ್ಠಕದಲ್ಲಿರುವ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿರಿ.

ಅಂದು ಕಾಡಿನಲ್ಲಿ ತೋಳ ಹಸಿದಿತ್ತು ಪ್ರಾಣಿಗಳಲ್ಲೇ ತೋಳ ತುಂಬಾ ಹೊಟ್ಟೆಬಾಕ ತಾನೇ ಅದರಲ್ಲೂ ಮೂರು ದಿನಗಳಿಂದ ಅದಕ್ಕೆ ಯಾವುದೇ ಆಹಾರ ದೊರೆತಿರಲಿಲ್ಲ ಜೊತೆಗೆ ವಯಸ್ಸು ಆಗಿತ್ತು ಬೇಗ ಬೇಗ ಓಡಾಡಲು ಆಗುತ್ತಿರಲಿಲ್ಲ ಇಷ್ಟಾದರೂ ಹಸಿವನ್ನು ನಿವಾರಿಸಿಕೊಳ್ಳಲು ಅದು ಕಾಡಿನ ಕಡೆಯಿಂದ ನಾಡಿನ ಕಡೆಗೆ ಹೆಜ್ಜೆಹಾಕುತ್ತಿತ್ತು ಅದೇ ವೇಳೆಗೆ ಅದೇ ಜಾಗಕ್ಕೆ ಒಂದು ನರಿ ಬಂತು ತೋಳವನ್ನು ಕಂಡು ಮಾತನಾಡಿಸಿ ನಮಸ್ಕಾರ ತೋಳಣ್ಣಾ ಸುಸ್ತಾಗಿದ್ದ ತೋಳ ಉಸಿರುಬಿಡುತ್ತಾ ಹೇಳಿತು ನಮಸ್ಕಾರ ನರಿಯಣ್ಣಾ ಯಾಕಣ್ಣಾ ಮುಖ ತುಂಬಾ ಸಪ್ಪೆ ಆಗಿರುವಂತೆ ಕಾಣುತ್ತಿದೆಯಲ್ಲಾ ನರಿಯಣ್ಣ ಪ್ರಶ್ನಿಸಿತು ಮತ್ತೆ ನಿಟ್ಟುಸಿರು ಬಿಡುತ್ತಾ ತೋಳ ಹೇಳಿತು ಇನ್ನು ಹೇಗಿರುತ್ತೆ ಮೂರು ದಿನದಿಂದ ತಿನ್ನಲು ಎಲ್ಲೂ ಒಂದು ತುಂಡೂ ಮಾಂಸ ಸಿಕ್ಕಿಲ್ಲ ನಾನೇನೂ ತಿಂದಿಲ್ಲ ತುಂಬಾ ಸುಸ್ತಾಗಿದ್ದೀನಿ ಅದ್ಯಾಕಣ್ಣಾ ಕಾಡಿನಲ್ಲಿ ಪ್ರಾಣಿಗಳಿಗೇನು ಕಡಿಮೆ ಯಾವುದಾದರೂ ಪುಟ್ಟಪ್ರಾಣಿಯ ಮೇಲೆ ಬಿದ್ದು ಕೊಂದು ನುಂಗಿ ನೀರು ಕುಡಿಯಬಹುದಿತ್ತಲ್ಲಾ

@KTBS
NOT TO BE REPUBLISHED

**ಲೇಖನ ಚಿಹ್ನೆಗಳು**

. ? ; “ ”

: ‘ ’ –

!

( ) + *

## ಬುನಾದಿ ಹಂತ – ಚಟುವಟಿಕೆ ಹಾಳೆ 9
# ವಚನ ಪ್ರಕಾರ ತಿಳಿಯೋಣ


ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ವಿದ್ಯಾರ್ಥಿಗಳು ನಾಮಪದ, ಸರ್ವನಾಮ, ವಿಭಿನ್ನ ಲೇಖನ ಚಿಹ್ನೆಗಳನ್ನು ಗುರುತಿಸಿ, ವಚನ ಬದಲಾಯಿಸಲು ಹಾಗೂ ಕಥೆ-ಕವನಗಳಲ್ಲಿ ಭಾಷಾ-ಗಾಂಭೀರ್ಯ, (ಉದಾಹರಣೆ, ಹೊಸ ಪದಗಳು, ಶಬ್ದಗಳ ಪುನರಾವರ್ತನೆ, ವಿರುದ್ಧಾರ್ಥಕ ಮತ್ತು ಸಮನಾರ್ಥಕ, ವಚನಗಳು, ನಾಮಪದ, ಸರ್ವನಾಮ, ವಿಭಿನ್ನ ಲೇಖನ ಚಿಹ್ನೆಗಳು) ಗುರುತಿಸಿ ಪ್ರಯೋಗಿಸುವರು."

"ಒಬ್ಬ ವ್ಯಕ್ತಿ, ಒಂದು ವಸ್ತು, ಒಂದು ಸ್ಥಳ ಎಂದು ಹೇಳುವ ಶಬ್ಧಗಳೇ ಏಕ ವಚನ"

"ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಕುರಿತು ಹೇಳುವ ಶಬ್ಧಗಳೇ ಬಹುವಚನ."

**ಚಟುವಟಿಕೆ 1 :** ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದವನ್ನು ವಚನ ಬದಲಿಸಿ ಬರೆಯಿರಿ

**ಮಾದರಿ :** ರಾಜು ತನ್ನ **ಬೆಕ್ಕನ್ನು** ಮುದ್ದಾಡಿದನು –ಬೆಕ್ಕುಗಳು

1. ತಂದೆ ತಾಯಿಗಳು ತಮ್ಮ **ಮಗು**ವಿಗೆ ತನ್ವಿತಾ ಎಂಬ ಹೆಸರಿಟ್ಟರು ____________
2. ಮೋನೀಷ್ ತನ್ನ ತಂಗಿಗೆ **ಬೊಂಬೆಗಳನ್ನು** ಕೊಟ್ಟನು. ____________
3. ಗೌರಿ ತನ್ನ **ಗೆಳತಿಯರ** ಜೊತೆಗೆ ಮಂಗಳೂರಿಗೆ ಹೊರಟಳು ____________
4. ನಮ್ಮ ತೋಟದಲ್ಲಿ ತುಂಬಾ **ಗಿಡಗಳು** ಇವೆ. ____________
5. ಬಿಂದು ತನಗೆ ಇಷ್ಟವಾದ ನೀಲಿ ಬಣ್ಣದ **ಪೆನ್ನು** ತಂದಳು.____________



**ಚಟುವಟಿಕೆ 2 :** ಮಾದರಿಯಂತೆ ಕೊಟ್ಟಿರುವ ಪದಗಳನ್ನು ಓದಿ ಬಹುವಚನ ರೂಪದಲ್ಲಿ ಬರೆಯಿರಿ.

**ಮಾದರಿ : ಹಕ್ಕಿ – ಹಕ್ಕಿಗಳು**

1. ನೊಣ –
2. ಜಾತ್ರೆ –
3. ಪ್ರಾಣಿ –
4. ವಾಹನ –
5. ನದಿ –



**ಚಟುವಟಿಕೆ 3 :** ನೀಡಿರುವ ವಾಕ್ಯಗಳನ್ನು ಓದಿ, ಅದರಲ್ಲಿ ಗೆರೆ ಎಳೆದಿರುವ ಪದಗಳಿಗೆ ಲಿಂಗ ಬದಲಿಸಿ ಬರೆಯಿರಿ.

1) **ಹುಡುಗನು** ಆಟವನ್ನು ಆಡುತ್ತಿದ್ದಾನೆ. ____________

2) **ವಿದ್ಯಾರ್ಥಿನಿಯು** ಪುಸ್ತಕವನ್ನು ಓದುತ್ತಿದ್ದಾಳೆ. ____________

3) ನನ್ನ **ಅಣ್ಣ** ನನಗೆ ತಿಂಡಿಯನ್ನು ತಂದನು. ____________

4) **ಚಿಕ್ಕಮ್ಮ** ಜಾತ್ರೆಗೆ ಹೋದಳು. ____________

5) **ಅಪ್ಪನು** ಅಡುಗೆಯನ್ನು ಮಾಡುವನು. ____________

©KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 10

# ಲಿಂಗ, ವಚನಗಳನ್ನು ಅರಿಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಕಲಿಕಾ ಫಲ: " ಭಾಷೆಯ ಸೂಕ್ಷ್ಮತೆಗಳ ಅಂಶಗಳನ್ನು, ಉದಾಹರಣೆಗೆ ಪದಗಳ ಪುನರಾವರ್ತನೆ, ಪದಗಳ ಅರ್ಥ, ಸರ್ವನಾಮ, ವಿಶೇಷಣ, ಲಿಂಗವಾಚಕ, ವಚನ ಇತ್ಯಾದಿ ಬಗ್ಗೆ ಎಚ್ಚರ ವಹಿಸುತ್ತಾ ಬರೆಯುವರು."

**ಚಟುವಟಿಕೆ 1 :** ಕೊಟ್ಟಿರುವ ಪದಗಳ ಲಿಂಗ ಪ್ರಭೇದಗಳನ್ನು ಕೆಳಕಂಡಂತೆ ವಿಂಗಡಿಸಿ ಬರೆಯಿರಿ.

ಸಮೃದ್ಧಿ, ತಾಯಿ, ರಮೇಶ, ದೂರದರ್ಶನ, ತಂದೆ, ಅಣ್ಣ, ಹಸು, ಹಿಮಾಲಯ ಪರ್ವತ, ಗಂಡು, ಶಿಕ್ಷಕಿ, ಸೈನಿಕ. ಹುಲಿ, ಶಾರದ, ಬೆಕ್ಕು, ಅರಸ, ಕಿಟಕಿ, ಈಶ್ವರ, ಬಾಗಿಲು, ಶಿಕ್ಷಕ, ಅಜ್ಜಿ, ಗಂಗಾನದಿ, ಅಕ್ಕ, ಗಡಿಯಾರ, ತಾತ, ಸುನೀತ, ಮಾವ, ಪುಸ್ತಕ ಚಿಕ್ಕಮ್ಮ, ಕಾಡು, ಅತ್ತಿಗೆ, ನೀರು, ರೈತ, ಹೆಣ್ಣು, ಜಯಶ್ರೀ, ನಕ್ಷತ್ರ, ಅತ್ತೆ, ಗಾಯಕ.

| ಮಾದರಿ | | |
|---|---|---|
| **ಪುಲ್ಲಿಂಗ** | **ಸ್ತ್ರೀಲಿಂಗ** | **ನಪುಂಸಕ ಲಿಂಗ** |
| **ತಂದೆ** | **ಸುನೀತ** | **ಪುಸ್ತಕ** |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |

@KTBS NOT TO BE REPUBLISHED

**ಚಟುವಟಿಕೆ 2 :** ಚಿತ್ರಗಳನ್ನು ನೋಡಿ ಸೂಕ್ತ ಪದಗಳನ್ನು ಬರೆಯಿರಿ.













@KTBS
NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಪದಗಳಿಗೆ ವಚನವನ್ನು ಬದಲಿಸಿ ಬರೆಯಿರಿ.

1. ನಾಯಿ – ____________________
2. ತಮ್ಮ – ____________________
3. ಹುಡುಗಿಯರು – ____________________
4. ಅಜ್ಜಿ – ____________________
5. ಲೋಟಗಳು – ____________________
6. ಮನೆ – ____________________
7. ಮಾವಂದಿರು – ____________________
8. ಹಣ್ಣುಗಳು – ____________________
9. ಹಬ್ಬ – ____________________
10. ಸ್ನೇಹಿತ – ____________________



## ಪತ್ರಿಕೆ ಓದೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ವಿವಿಧ ರಚನೆಗಳು, ವಿಷಯ ಸಾಮಗ್ರಿಗಳು, ಸುದ್ದಿ ಪತ್ರಿಕೆ, ಬಾಲಪತ್ರಿಕೆ ಮುಂತಾದವುಗಳನ್ನು ಓದಿ ಪ್ರತಿಕ್ರಿಯಿಸುವರು. ಕೇಳಿದ ಪ್ರಶ್ನೆಗಳಿಗೆ ಲಿಖಿತವಾಗಿ ಉತ್ತರ ನೀಡುವರು."

**ಚಟುವಟುಕೆ 1 :** ಪ್ರಕಟಣೆಯನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.




1). ಈ ಪ್ರಕಟಣೆಯ ಶೀರ್ಷಿಕೆ ಏನು?

..............................................................

..............................................................

2) ಈ ಪ್ರಕಟಣೆಯನ್ನು ಹೊರಡಿಸಿರುವ ಇಲಾಖೆಯ ಹೆಸರೇನು?

..............................................................

..............................................................

3) ನೀವು ವಾರ್ತಾ ಪತ್ರಿಕೆ ಓದಿ ಮುಗಿಸಿದ ನಂತರ ಕೈಗೊಳ್ಳಬಹುದಾದ ಒಂದು ಚಟುವಟಿಕೆಯನ್ನು ಬರೆಯಿರಿ.

..............................................................................................................................

4) ಈ ಘೋಷ ವಾಕ್ಯವನ್ನು ಪೂರ್ಣಗೊಳಿಸಿ. "ಬನ್ನಿ ಮಕ್ಕಳೇ, ವಾರ್ತಾ ಪತ್ರಿಕೆ ಓದೋಣ "

..............................................................................................................................

5) ಈ ಪ್ರಕಟಣೆಯನ್ನು ಯಾವ ತಿಂಗಳಿನಲ್ಲಿ ಹೊರಡಿಸಲಾಗಿದೆ?

..............................................................................................................................

6) ಈ ಪ್ರಕಟಣೆಯಲ್ಲಿರುವ ಸಂಯುಕ್ತಾಕ್ಷರ ಪದಗಳನ್ನು ಬರೆಯಿರಿ.

..............................................................................................................................

©KTBS NOT TO BE REPUBLISHED

**ಚಟುವಟಿಕೆ 2 :** ಈ ಚಿತ್ರವನ್ನು ನೋಡಿ ಪ್ರಮುಖ ಕನ್ನಡ ದಿನಪತ್ರಿಕೆಗಳ ಹೆಸರನ್ನು ಪಟ್ಟಿ ಮಾಡಿ.

1. ______________________
2. ______________________
3. ______________________
4. ______________________
5. ______________________
6. ______________________




**ಚಟುವಟಿಕೆ 3 :** ಪತ್ರಿಕೆಯಲ್ಲಿ ಪ್ರಕಟವಾಗಿರುವ ಈ ಕವಿತೆಯನ್ನು ಓದಿ ಪ್ರಾಸಪದಗಳನ್ನು ಪಟ್ಟಿ ಮಾಡಿ






ಮಾದರಿ :

**ಹೂವೆ – ಠಾವೆ**

______________________

______________________

______________________

______________________

NOT TO BE REPUBLISHED @KTBS

## ಬುನಾದಿ ಹಂತ – ಚಟುವಟಿಕೆ ಹಾಳೆ 12
# ಓದೋಣ, ನೋಡಿ ಬರೆಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಬೋರ್ಡ್ ಅಥವಾ ಪ್ರಕಟಣೆಯ ಮೇಲೆ ಬರೆದಿರುವ ಸೂಚನೆ, ಪದ್ಯ, ವರದಿ ಮುಂತಾದವನ್ನು ನಿರ್ದಿಷ್ಟ ಉದ್ದೇಶಕ್ಕೆ ಓದಿ ಮತ್ತು ನಕಲಿಸಿ ಬರೆಯುವರು.

**ಚಟುವಟಿಕೆ 1 :** ಕೊಟ್ಟಿರುವ ಪದ್ಯದ ಸಾಲುಗಳನ್ನು ತಪ್ಪಿಲ್ಲದೆ ಈ ಕೆಳಗೆ ನೀಡಿರುವ ಜಾಗದಲ್ಲಿ ಬರೆಯಿರಿ.

ರೆಂಬಿ ಕೊಂಬಿಯ ಮ್ಯಾಲ ಗೂಡು ಕಟ್ಟಿದಾವ
ರೆಕ್ಕೆ ಬಲಿತ ಹಕ್ಕಿ
ಗೂಡಿನಾಗ । ಮಲಗ್ಯಾವ ಮರಿಹಕ್ಕಿ ॥
ದೂರ ದೇಶದ ಬಳಗ
ಬನ್ನಿರಿ । ನೀವು ನಮ್ಮ ಬಳಗ।



---------------------------------------------------------------

---------------------------------------------------------------

---------------------------------------------------------------

---------------------------------------------------------------

---------------------------------------------------------------

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ

1. ರೆಂಬಿ ____________________
2. ಕೊಂಬಿ ____________________
3. ಮ್ಯಾಲ ____________________
4. ಗೂಡಿನಾಗ ____________________
5. ಮಲಗ್ಯಾವ ____________________



**ಚಟುವಟಿಕೆ 3 :** ಕೊಟ್ಟಿರುವ ಸೂಚನಾಫಲಕ ಓದಿ, ನೀಡಿರುವ ಪ್ರಶ್ನೆಗಳಿಗೆ ಉತ್ತರ ಹುಡುಕಿ ಬರೆಯಿರಿ.




1. ಸೂಚನಾ ಫಲಕದಲ್ಲಿರುವ ಮಕ್ಕಳ ಸಹಾಯವಾಣಿ ಸಂಖ್ಯೆ ಯಾವುದು ?

________________________________

________________________________

2. ಯಾವ ಯಾವ ಸಂದರ್ಭದಲ್ಲಿ ಮಕ್ಕಳು ಸಹಾಯವಾಣಿಗೆ ಕರೆ ಮಾಡಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

________________________________

________________________________

____________________________________________________________________

____________________________________________________________________

____________________________________________________________________

3. ಈ ಮೇಲೆ ಕೊಟ್ಟಿರುವ ಪ್ರಕಟಣೆಯನ್ನು ಯಾವ ಯಾವ ಇಲಾಖೆಗಳು ಪ್ರಕಟಿಸಿವೆ.

____________________________________________________________________

**ಚಟುವಟಿಕೆ 4 :** ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ನಿಮಗೆ ಇಷ್ಟವಾದ ಸ್ನೇಹಿತರ ಹೆಸರನ್ನು ಬರೆಯಿರಿ.

____________________________________________________________________

2. ನೀವು ನಿಮ್ಮ ಸುತ್ತ ಮುತ್ತ ನೋಡಿರುವ ಪ್ರಾಣಿಗಳ ಹೆಸರು ಬರೆಯಿರಿ.

____________________________________________________________________

3. ನೀವು ಶಾಲೆಯಲ್ಲಿ ಕಲಿಯುವ ಭಾಷಾ ವಿಷಯಗಳನ್ನು ಪಟ್ಟಿಮಾಡಿ.

____________________________________________________________________

4. ನಿಮ್ಮ ಶಾಲಾ ಗ್ರಂಥಾಲಯದಲ್ಲಿರುವ 4 ಪುಸ್ತಕಗಳ ಹೆಸರನ್ನು ಪಟ್ಟಿ ಮಾಡಿ.

____________________________________________________________________

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 13

## ಜ್ಞಾಪಿಸಿ ಬರೆಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ವಿವಿಧ ರಚನೆಗಳು, ವಿಶೇಷ ಸಾಮಗ್ರಿಗಳು ಮುಂತಾದವುಗಳನ್ನು ಕುರಿತು ತಿಳಿಸುವರು, ಪ್ರತಿಕ್ರಿಯಿಸುವರು ಮತ್ತು ಕೇಳಿದ ಪ್ರಶ್ನೆಗಳಿಗೆ ಲಿಖಿತವಾಗಿ ಉತ್ತರ ನೀಡುವರು."

**ಚಟುವಟಿಕೆ 1 :** ನಿಮ್ಮ ಶಾಲೆಯಲ್ಲಿ ಆಚರಿಸುವ ಶಾಲಾ ವಾರ್ಷಿಕೋತ್ಸವದ ಕಾರ್ಯಕ್ರಮಗಳನ್ನು ಕ್ರಮಾನುಗತವಾಗಿ ಬರೆಯಿರಿ.

**ವೇದಿಕೆ ಕಾರ್ಯಕ್ರಮ , ಸ್ವಾಗತ , ಪ್ರಾರ್ಥನೆ, ಉದ್ಘಾಟನೆ , ಸಾಂಸ್ಕೃತಿಕ ಕಾರ್ಯಕ್ರಮ , ಭಾಷಣ , ವಂದನಾರ್ಪಣೆ.**

1. ____________________
2. ____________________
3. ____________________
4. ____________________
5. ____________________
6. ____________________

**ಚಟುವಟಿಕೆ 2 :** ನೀವು ಪ್ರವಾಸಕ್ಕೆ ಹೋಗಿದ್ದ ಸ್ಥಳಗಳನ್ನು ಪಟ್ಟಿಮಾಡಿ ಬರೆಯಿರಿ.



1. ____________________
2. ____________________
3. ____________________
4. ____________________
5. ____________________
6. ____________________
7. ____________________

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 14

# ಕವನ ರಚಿಸಿ ಓದೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ಕಥೆ, ಕವಿತೆ ಮುಂತಾದವುಗಳನ್ನು ಸರಿಯಾದ ಉಚ್ಚಾರಣೆ, ಸೂಕ್ತವಾದ ಸ್ವರಭಾರ, ಗತಿ ಮತ್ತು ಅಭಿನಯದ ಮೂಲಕ ತಿಳಿಸುವರು."

**ಚಟುವಟಿಕೆ 1 :** ಕೆಳಗಿನ ಪದಗಳನ್ನು ಬಳಸಿ ಒಂದು ಪುಟ್ಟ ಕವಿತೆ ರಚಿಸಿ

**ರಜಾ, ಸಜಾ, ಆಡೋಣ, ಹಾಡೋಣ , ಕೋಪ , ತಾಪ**

@KTBS NOT TO BE REPUBLISHED

**ಚಟುವಟಿಕೆ 2 :** ಈ ಕೆಳಗಿನ ಚಿತ್ರವನ್ನು ನೋಡಿ ಒಂದು ಕವಿತೆ ರಚಿಸಿ.



**ಚಟುವಟಿಕೆ 3 :** ಈ ಕೆಳಗಿನ ಕಥೆಯನ್ನು ಓದಿ ಅದನ್ನು ಕವಿತೆ ರೂಪದಲ್ಲಿ ಬರೆಯಿರಿ.

## ಬುದ್ಧಿಮಾತು ತೋರಿದ ಚಿಟ್ಟೆ

ಒಂದಾನೊಂದು ಕಾಲದಲ್ಲಿ ಒಂದು ಚಿಕ್ಕ ಚಿಟ್ಟೆ ಇದ್ದಿತು. ಅದು ತುಂಬಾ ಬುದ್ದಿವಂತ ಮತ್ತು ಸಹಾಯ ಮಾಡುವ ಗುಣ ಹೊಂದಿತ್ತು. ಒಂದು ದಿನ ಕಾಡಿಗೆ ದೊಡ್ಡ ಬೆಂಕಿ ಬಿದ್ದಿತು. ಎಲ್ಲಾ ಜಾನುವಾರುಗಳು ಭಯದಿಂದ ಓಡತೊಡಗಿದವು. ಆದರೆ ಆ ಚಿಕ್ಕ ಚಿಟ್ಟೆ ಬೆಂಕಿಯನ್ನು ನಂದಿಸಲು ಏನು ಮಾಡಬಹುದೆಂದು ಯೋಚಿಸತೊಡಗಿತು.

ಅದು ಹತ್ತಿರದ ನದಿಗೆ ಹಾರಿ, ತನ್ನ ರೆಕ್ಕೆಯಲ್ಲಿ ಒಂದು ಹನಿ ನೀರನ್ನು ತೆಗೆದುಕೊಂಡು ಬೆಂಕಿಯ ಮೇಲೆ ಹಾಕಿತು. ಇದನ್ನು ನೋಡಿದ ಇತರೆ ಚಿಟ್ಟೆಗಳು ತಮಗಾಗುವಷ್ಟು ಸಹಾಯ ಮಾಡಲು ಪ್ರೇರಿತರಾದವು. ಎಲ್ಲರೂ ಸೇರಿ ಬೆಂಕಿಯನ್ನು ನಂದಿಸಲು ಶ್ರಮಿಸಿದವು. ಕೊನೆಗೆ ಬೆಂಕಿ ನಂದಿತು! ಎಲ್ಲವೂ ಆ ಚಿಟ್ಟೆಗೆ ಧನ್ಯವಾದ ಹೇಳಿದವು. ನಂತರ ಆ ಚಿಕ್ಕ ಚಿಟ್ಟೆ ಹೇಳಿತು: "ಸಣ್ಣ ಸಹಾಯವೂ ಮಹತ್ವಪೂರ್ಣ, ಎಲ್ಲರೂ ಸೇರಿದರೆ ದೊಡ್ಡ ಕೆಲಸವನ್ನೂ ಸಾಧಿಸಬಹುದೆಂದು!"



© KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 15
# ಶೀರ್ಷಿಕೆ ಬರೆಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಅಪರಿಚಿತ ಸನ್ನಿವೇಶ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಂಡು ಆಲಿಸಿದ ರಚನೆಗಳ ವಿಷಯವನ್ನು ಘಟನೆಗಳು ಪಾತ್ರಗಳು ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುವರು, ಪ್ರಶ್ನಿಸುವರು ಮತ್ತು ಪ್ರತಿಕ್ರಿಯಿಸುವರು. ಹಾಗೂ ತಮ್ಮದೇ ಆದ ವಿಧಾನದಿಂದ ತಮ್ಮದೇ ಆದ ಭಾಷೆಯಲ್ಲಿ ಅಭಿವ್ಯಕ್ತಿಸುವರು.

**ಚಟುವಟಿಕೆ 1 :** ಈ ಕೆಳಗಿನ ಕವಿತೆಯನ್ನು ಓದಿ ಅದನ್ನು ಕಥೆ ರೂಪದಲ್ಲಿ ಬರೆಯಿರಿ.

ಕೂಸು ಇದ್ದ ಮನೆಗೆ ಬೀಸಣಿಕೆ ಯಾತಕ।
ಕೂಸು ಕಂದಯ್ಯ ಒಳ ಹೊರಗ। ಆಡಿದರ
ಬೀಸಣಿಕೆ ಗಾಳಿ ಸುಳಿದಾವ ॥

ಆಡಿ ಬಾ ನನ ಕಂದ ಅಂಗಾಲ ತೊಳೆದೇನ
ತೆಂಗಿನ ಕಾಯಿ ತಿಳಿನೀರ ತಕ್ಕೊಂಡು
ಬಂಗಾರ ಮಾರಿ ತೊಳೆದೇನ ॥

ಸಾರಾಂಶ :

______________________________

______________________________

______________________________

______________________________

______________________________

ಶೀರ್ಷಿಕೆ : ______________________________

@KTBS NOT TO BE REPUBLISHED

**ಚಟುವಟಿಕೆ 2 :** ನೀಡಿರುವ ಚಿತ್ರಗಳನ್ನು ಗಮನಿಸಿ ಅರ್ಥೈಸಿಕೊಂಡು, ಶೀರ್ಷಿಕೆ ಬರೆಯಿರಿ.




ಶೀರ್ಷಿಕೆ : ______________________________

ಬುನಾದಿ ಹಂತ – ಚಟುವಟಿಕೆ ಹಾಳೆ 16

# ಗಾದೆ ಪೂರ್ಣಗೊಳಿಸೋಣ, ಗಾದೆ ಹೆಸರು ಅರಿಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ಹೇಳುತ್ತಿರುವ ಮಾತು, ವಿಚಾರ, ಕಥೆ, ಕವಿತೆ ಮುಂತಾದವುಗಳನ್ನು ಗಮನವಿಟ್ಟು ಆಲಿಸಿ, ತನ್ನದೇ ಆದ ಮಾತುಗಳಲ್ಲಿ ಹೇಳುವರು. ಆಲಿಸಿದ ಗಾದೆಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಪೂರ್ಣಗೊಳಿಸುವರು."

**ಚಟುವಟಿಕೆ 1 :** ಕೊಟ್ಟಿರುವ ಗಾದೆ ಮಾತುಗಳನ್ನು ಪೂರ್ಣಗೊಳಿಸಿ ಬರೆಯಿರಿ.

1. ಅತಿ ಆಸೆ ________________________________
2. ಮನಸ್ಸಿದ್ದರೆ ________________________________
3. ಗಾಳಿ ಬಂದಾಗ ________________________________
4. ತಾಳಿದವನು ________________________________
5. ದುಡಿತವೇ ದುಡ್ಡಿನ ________________________________



**ಚಟುವಟಿಕೆ 2 :** ಕೆಳಗೆ ನೀಡಿರುವ ಗಾದೆ ಮತ್ತು ಒಗಟುಗಳನ್ನು ವರ್ಗೀಕರಿಸಿ ಬರೆಯಿರಿ.

(ಮಾಡಿದ್ದುಣ್ಣೋ ಮಾರಾಯ, ಸಾಗರ ಪುತ್ರ ಸಾರಿಗೆ ಮಿತ್ರ , ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು, ಹಾರಿದರೆ ಹನುಮಂತ ಕೂತರೆ ಮುನಿ ಕೂಗಿದರೆ ಕಾಡಿನ ಒಡೆಯ, ಗಾಳಿ ಬಂದಾಗ ತೂರಿಕೋ, ಹೊಂಚು ಹಾಕಿದ ದೆವ್ವ ಬೇಡ ಬೇಡ ಎಂದರು ಜೊತೆಗೆ ಬರುತ್ತೆ)

| ಗಾದೆ | ಒಗಟು |
|---|---|
| | |
| | |
| | |
| | |
| | |
| | |
| | |

©KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 17

## ಒಗಟು ಬಿಡಿಸೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** “ವಿದ್ಯಾರ್ಥಿಗಳು ಹೇಳುತ್ತಿರುವ ಕಥೆ, ಕಥನ, ಕವಿತೆ, ವಿವರಣೆ ಮತ್ತು ಒಗಟುಗಳನ್ನು ಆಸಕ್ತಿಯಿಂದ ಕೇಳಿ, ಅರ್ಥಮಾಡಿಕೊಳ್ಳುವರು ಮತ್ತು ಪ್ರತಿಕ್ರಿಯೆ ನೀಡುವರು.

**ಚಟುವಟಿಕೆ 1 :** ಚಿತ್ರನೋಡಿ ಒಗಟು ಬಿಡಿಸಿ.
















©KTBS
NOT TO BE REPUBLISHED

**ಚಟುವಟಿಕೆ 2 :** ಒಗಟು ಬಿಡಿಸಿ.

1. ತಲೆಯಿಲ್ಲ ಕೈಕಾಲು ಇಲ್ಲ ಮೂಲ್ಯಾಗ ಕುಂತು ಮಾತಾಡುತ್ತೆ. ______
2. ಆಕಾಶಕ್ಕೆ ಏರುವಾಗ ಎರಡು ರೆಕ್ಕೆ, ಭೂಮಿಗೆ ಇಳಿಯುವಾಗ ಎರಡು ಕಾಲು ______
3. ಕುತ್ತಿಗೆ ಇದೆ, ಶಿರ ಇಲ್ಲ ______
4. ಕಪ್ಪು ಬಣ್ಣ ಸೂಜಿಯ ಹಾಗೆ ಸಣ್ಣ ______
5. ಕೋಟೆಯೊಳಗೆ ಕೊಳ______
6. ಗಿರಗಿರ ತಿರುಗುತ್ತೆ ಸುಸ್ತಾಗಿ ಬೀಳುತ್ತೆ. ______
7. ಹುಟ್ಟುತ್ತಲೇ ಹುಡುಗ ತಲೆಯಲ್ಲಿ ಟೋಪಿ ಹಾಕಿರುತ್ತೆ. ______
8. ಸಾಗರ ಪುತ್ರ ಸಾರಿನ ಮಿತ್ರ. ______
9.ಒಂದು ಹಪ್ಪಳ ಊರಿಗೆಲ್ಲ ಊಟ. ______

@KTBS
NOT TO BE REPUBLISHED

**ಚಟುವಟಿಕೆ 3 :** ಕೆಳಗಿನ ವಸ್ತು, ಪದಗಳನ್ನು ಬಳಸಿ ಒಗಟು ರಚಿಸಿ

**ಮಾದರಿ : ದೀಪ : ಇದು ಹೊತ್ತರೆ ಬೆಳಕು ಅತ್ತರೆ ಬೆಂಕಿ.**

1. ಕಣ್ಣು : ______
2. ಮೊಟ್ಟೆ : ______
3. ಬೆಂಕಿ ಕಡ್ಡಿ: ______
4. ತೆಂಗಿನ ಕಾಯಿ : ______
5. ನವಿಲು : ______
6. ಬಾಳೆಹಣ್ಣು : ______
7. ಇದ್ದಿಲು : ______



ಬುನಾದಿ ಹಂತ - ಚಟುವಟಿಕೆ ಹಾಳೆ 18

## ಪ್ರಾಸ ಅರಿಯೋಣ -ಪದ ಬರೆಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ತಮ್ಮ ನಿಜ ಜೀವನದ ಮತ್ತು ಪರಿಸರ ಆಧಾರಿತ ಅನುಭವಗಳನ್ನು ಆಲಿಸುತ್ತಿರುವ ವಿಷಯ ಸಾಮಗ್ರಿ, ಅಂದರೆ ಕವಿತೆ, ಕಥೆ, ಪೋಸ್ಟರ್, ಜಾಹೀರಾತುಗಳನ್ನು ಸಂಬಂಧಿಕರಿಸಿ ಮಾತನಾಡಲು ಭಾಗಿಯಾಗುವರು. ಭಾಷೆಯಲ್ಲಿ ಅಂತರ್ಗತವಾಗಿರುವ ಧ್ವನಿ, ಪ್ರಾಸಗಳನ್ನು ಹಿಡಿದು, ಆಟವಾಡಿ ಆನಂದಿಸುತ್ತಾ ಸ್ವತಃ ಪದಗಳನ್ನು ಸೃಷ್ಟಿಸಿಕೊಳ್ಳುವರು.

**ಚಟುವಟಿಕೆ 1 :** ಈ ಕೆಳಗಿನ ಪದ್ಯ ಭಾಗವನ್ನು ಓದಿ ಪ್ರಾಸ ಪದಗಳನ್ನು ಪಟ್ಟಿ ಮಾಡಿ.

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸನಿದಪ ಮಗರಿಸ ಹಾಡಿದನು

1. ______________________

2. ______________________

**ಚಟುವಟಿಕೆ 2 :** ಈ ಕೆಳಗೆ ನೀಡಿರುವ ಪ್ರಾಸ ಪದಗಳನ್ನು ಸರಿಯಾಗಿ ಹೊಂದಿಸಿ ಬರೆಯಿರಿ.

**ಕಂದ, ರನ್ನ, ಸಕ್ಕರೆ, ಚಂದ, ಚಿನ್ನ, ಅಕ್ಕರೆ, ತುಪ್ಪ, ಪಾಲಾಯ್ತು, ದಪ್ಪ, ಬೋಳಾಯ್ತು**

1. ______________  2. ______________

3. ______________  4. ______________

5. ______________

**ಚಟುವಟಿಕೆ 3 :** ನೀಡಿರುವ ಪದಗಳನ್ನು ಬಳಸಿ ಒಂದು ಪುಟ್ಟ ಪ್ರಾಸ ಕವನ ರಚಿಸಿ

**ಹೋರಾಡು, ಆನಂದ, ಚಿನ್ನ, ಕಾಪಾಡು, ಕಂದ , ನನ್ನ**

______________________________________________

______________________________________________

______________________________________________

______________________________________________

______________________________________________

______________________________________________

______________________________________________

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 19
# ಚಿತ್ರಕಥೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ಆಲಿಸಿದ, ನೋಡಿದ ಮಾತು, ವಿಚಾರ, ಕಥೆ, ಕವಿತೆ, ವಿಷಯ ವಿಚಾರಗಳ ಬಗ್ಗೆ ಮಾತನಾಡುವರು ಮತ್ತು ಪ್ರತಿಕ್ರಿಯಿಸುವರು. ತನ್ನ ನಿಜಜೀವನ ಮತ್ತು ಸುತ್ತಮುತ್ತಲಿನ ಪರಿಸರದ ಅನುಭವಗಳನ್ನು ತಾನು ಕೇಳಿದ ಕಥೆ, ಕವಿತೆಗಳಿಗೆ, ನೋಡಿದ ಪೋಸ್ಟರ್, ಮನವಿ ಇತ್ಯಾದಿಗಳ ಜೊತೆ ಸಂಬಂಧಿಕರಿಸುವರು ಮತ್ತು ಅವೆಲ್ಲವನ್ನು ತನ್ನ ಮಾತು, ಕಥೆ ಒಳಗೆ ತಂದುಕೊಳ್ಳುವರು."

**ಚಟುವಟಿಕೆ 1 :** ಬಾವಿಯಲ್ಲಿ ಚಂದ್ರ



ಒಂದು ಊರಿನಲ್ಲಿ ಗೋಪಿ ಮತ್ತು ಪುಟ್ಟು ಎಂಬ ಇಬ್ಬರು ಅಣ್ಣ ತಂಗಿ ಇರುತ್ತಾರೆ. ಒಂದು ದಿನ ರಾತ್ರಿ ಹೊರಗೆ ಬಹಳ ಬೆಳಕು ಇರುತ್ತದೆ. ಇಬ್ಬರು ಹೊರಗೆ ಆಡುತ್ತಾ ಇರುವಾಗ ಬಾವಿಯಲ್ಲಿ ಏನೋ ಶಬ್ದ ಕೇಳಿಸುತ್ತದೆ. ಇಬ್ಬರು ಹೋಗಿ ಬಾವಿಯಲ್ಲಿ ಬಗ್ಗಿ ನೋಡುತ್ತಾರೆ. ನೋಡಿದರೆ ಚಂದ್ರ ಬಾವಿಯಲ್ಲಿ ಬಿದ್ದು ಬಿಟ್ಟಿರುತ್ತಾನೆ. ಇಬ್ಬರಿಗೂ ಬಹಳ ಬೇಜಾರು ಆಗುತ್ತದೆ. ಆಗ ಇಬ್ಬರು ಏನು ಮಾಡುವುದು ಎಂದು ಮಾತನಾಡಿಕೊಳ್ಳುತ್ತಾರೆ. ಆಗ ಪುಟ್ಟು 'ಕೊಕ್ಕೆ ಇರುವ ಹಗ್ಗವನ್ನು ತರುತ್ತೇನೆ, ಅದನ್ನು ಬಾವಿಯೊಳಗೆ ಬಿಟ್ಟು ಚಂದ್ರನನ್ನು ಮೇಲಕ್ಕೆ ಎತ್ತೋಣ' ಎಂದು ಹೇಳಿ ಓಡಿ ಹೋಗಿ ಹಗ್ಗ ತಂದು ಬಾವಿಯಲ್ಲಿ ಬಿಟ್ಟು, ಇಬ್ಬರು ಎಳೆಯುತ್ತಾರೆ. ಇನ್ನೂ ಜೋರಾಗಿ ಎಳೆಯೋಣ ಎಂದು ಗೋಪಿ ಹೇಳುತ್ತಾಳೆ. ಇಬ್ಬರು ಸೇರಿ ಎಲ್ಲಾ ಶಕ್ತಿ ಬಿಟ್ಟು ಎಳೆಯುತ್ತಾರೆ, ಕೊಕ್ಕೆಯು ಬಾವಿಯ ಕಲ್ಲಿಗೆ ಸಿಕ್ಕಿರುತ್ತದೆ, ಆಗ ಇಬ್ಬರು ಜೋರಾಗಿ ಹಗ್ಗ ಎಳೆಯುತ್ತಾರೆ. ಅದು ತುಂಡಾಗುತ್ತದೆ. ಇಬ್ಬರು ನೆಲಕ್ಕೆ ಬೀಳುತ್ತಾರೆ. ಆಗ ಆಕಾಶ ನೋಡುತ್ತಾರೆ. ಅಲ್ಲಿ ಚಂದ್ರ ಇರುತ್ತಾನೆ. ಇಬ್ಬರಿಗೂ ಬಹಳ ಖುಷಿಯಾಗಿ ನಾವು ಚಂದ್ರನನ್ನು ಬದುಕಿಸಿ ಬಿಟ್ಟೆವು ಎಂದು ಅಮ್ಮನಿಗೆ ಹೇಳಲು ಅಡುಗೆ ಮನೆಗೆ ಓಡುತ್ತಾರೆ.

NOT TO BE REPUBLISHED ©KTBS

ಬಿಟ್ಟ ಸ್ಥಳದಲ್ಲಿ ಸೂಕ್ತ ಪದ ಆರಿಸಿ ಬರೆಯಿರಿ.

1.ಚಂದ್ರ ಬಿದ್ದಿದ್ದ ಜಾಗ __________________
(ನೆಲ, ಕಾಡು, ಬಾವಿ, ಅಂಗಳ)

2.ಚಂದ್ರನನ್ನು ಬಾವಿಯಿಂದ ಎತ್ತಲು ಬಳಸಿದ ವಸ್ತು ______________
(ಕೋಲು, ಕಡ್ಡಿ, ಹಗ್ಗ, ಕೊಕ್ಕೆ ಇದ್ದ ಹಗ್ಗ)

3.ಚಂದ್ರನನ್ನು ಬಾವಿಯಿಂದ ಎಳೆದವರು ______________
(ರವಿ–ರಾಜು, ಕಿಟ್ಟು–ಪುಟ್ಟು, ಗೋಪಿ–ಪುಟ್ಟು, ಮಂಜು–ಸಂಜು)

4.ಗೋಪಿ– ಪುಟ್ಟು __________________
(ಅಣ್ಣ–ತಮ್ಮ, ಅಕ್ಕ–ತಮ್ಮ, ತಮ್ಮ–ಅಣ್ಣ, ಅಣ್ಣ–ತಂಗಿ)

**ಚಟುವಟಿಕೆ 2 :** ಅಜ್ಜಿ ಹುಂಜ

**ಸೂಚನೆ:** ಮಕ್ಕಳೇ, ನಿಮಗೆ ಇಲ್ಲಿ ಅರ್ಧ ಕಥೆ ಕೊಟ್ಟಿದೆ. ನೀವು ಕಥೆಯನ್ನು ಪೂರ್ಣಗೊಳಿಸಿ, ಅದಕ್ಕೆ ಕೆಲವು ಸುಳಿವು ಕೂಡ ನಿಮಗೆ ಕೊಡುತ್ತೇನೆ.

**ಸುಳಿವು:**
- ಅಜ್ಜಿ ಹುಂಜ ತೆಗೆದುಕೊಂಡು ಏನು ಮಾಡಿರಬಹುದು ?
- ಊರಿನಲ್ಲಿ ಹುಂಜವಿಲ್ಲದೆ ಬೆಳಕಾಗಿರಬಹುದೆ? ಅಥವಾ ಊರಿನವರು ಏನು ಮಾಡಿರಬಹುದು?

ಒಂದು ಊರಲ್ಲಿ ಒಬ್ಬ ಅಜ್ಜಿ ಇದ್ದಳು. ಅವಳು ಒಂದು ಹುಂಜ ಸಾಕಿದ್ದಳು. ಆ ಹುಂಜ ತುಂಬಾ ಸುಂದರವಾಗಿತ್ತು. ಆ ಊರಿನ ಜನರು ಬಹಳ ಮುಗ್ಧರಾಗಿದ್ದರು. ಅಜ್ಜಿಯ ಹುಂಜವು ಪ್ರತಿ ದಿನ ಸೂರ್ಯ ಹುಟ್ಟುವುದಕ್ಕೆ ಮೊದಲೇ ಊರಿಗೆಲ್ಲಾ ಕೇಳುವಂತೆ ಜೋರಾಗಿ ಕೊಕ್ಕೊ.. ಕೊಕ್ಕೋ.. ಕೊಕ್ಕೋ.. ಎಂದು ಜೋರಾಗಿ ಕೂಗುತ್ತಿತ್ತು. ಆಗ ಊರಿನವರೆಲ್ಲರೂ ಎದ್ದು ತಮ್ಮ ತಮ್ಮ ಮನೆಗೆಲಸ ಮತ್ತು ತೋಟದ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು. ಇದನ್ನು ಅಜ್ಜಿ ದಿನ ದಿನವೂ ನೋಡುತ್ತಿದ್ದಳು. ನನ್ನ ಹುಂಜದಿಂದಲ್ಲೇ ಊರಲ್ಲಿ ಬೆಳಕಾಗಿ ಇವರಿಗೆಲ್ಲ ಅವರ ಕೆಲಸ ಮಾಡಿಕೊಳ್ಳಲು ಸಹಾಯವಾಗಿದೆ ಎಂದು ತಿಳಿದು, ಅವಳಿಗೆ ತುಂಬ ಜಂಭ ಬಂದಿತು. ಅದಕ್ಕೆ ಅವಳು ಇವರೆಲ್ಲಾ ನನ್ನ ಹತ್ತಿರ ಬಂದು ಕೇಳಬೇಕು ಹಾಗೆ ಮಾಡುತ್ತೇನೆ ಎಂದುಕೊಂಡು ಒಂದು ಉಪಾಯ ಮಾಡಿದಳು.



----------------------------------------------------------------

----------------------------------------------------------------

----------------------------------------------------------------

----------------------------------------------------------------

@KTBS NOT TO BE REPUBLISHED

**ಚಟುವಟಿಕೆ 3 :** ಚಿತ್ರದಲ್ಲಿರುವ ಇತರ ಪ್ರಾಣಿಗಳು ಏನು ಹೇಳಿರಬಹುದು ಎಂದು ಊಹಿಸಿ ಕಥೆ ಪೂರ್ಣಗೊಳಿಸಿ.



ಒಂದು ಕಾಡಿನಲ್ಲಿ ಅನೇಕ ಪ್ರಾಣಿಗಳು ವಾಸವಾಗಿದ್ದವು. ಅವು ಬಹಳ ಅನ್ಯೋನ್ಯವಾಗಿದ್ದವು. ತಮ್ಮಲ್ಲಿ ಒಬ್ಬರು ರಾಜ ಆಗಬೇಕೆಂದು ನಿರ್ಧರಿಸಿದವು. ಅದಕ್ಕಾಗಿ ಎಲ್ಲವೂ ಸಭೆ ಸೇರಿದವು. ಎಲ್ಲ ಪ್ರಾಣಿಗಳೂ ತಮ್ಮ ಶಕ್ತಿ ಸಾಮರ್ಥ್ಯಗಳ ಬಗ್ಗೆ ವಿವರಿಸಿದವು. ಮೊದಲು ಆನೆ, "ದೊಡ್ಡ ಗಾತ್ರ ಇದ್ದೇನೆ. ನನ್ನ ಸೊಂಡಿಲು ಉದ್ದ ಇದೆ. ನಾನು ಕಾಡನ್ನು ರಕ್ಷಿಸುತ್ತೇನೆ". ಎಂದಿತು. ಅನಂತರ

## ಬುನಾದಿ ಹಂತ – ಚಟುವಟಿಕೆ ಹಾಳೆ 20
# ಫಲಕ ನೋಡಿ ಪಾಲಿಸು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** “ ವಿದ್ಯಾರ್ಥಿಗಳು ವಿವಿಧ ಪರಿಸರ ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಸೂಚನಾ ಫಲಕಗಳನ್ನು ಓದಿ ಅರ್ಥಮಾಡಿಕೊಳ್ಳುವರು ಮತ್ತು ಅವುಗಳ ಬಗ್ಗೆ ಬರೆಯುವರು.”

**ಚಟುವಟಿಕೆ 1 :** ಈ ಕೆಳಗಿನ ಚಿತ್ರಗಳನ್ನು ಗಮನಿಸಿ ಫಲಕಗಳ ಸೂಚನೆಗಳನ್ನು ಬರೆಯಿರಿ.











@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿ, ಮಾಡಬೇಕಾದ ಮತ್ತು ಮಾಡಬಾರದ ಸೂಚನೆಗಳನ್ನು ವಿಂಗಡಿಸಿ ಕೆಳಗೆ ಕೊಟ್ಟಿರುವ ಜಾಗದಲ್ಲಿ ಬರೆಯಿರಿ.



1. ಕೈಗಳನ್ನು ಸ್ವಚ್ಛವಾಗಿ ತೊಳೆಯಬೇಕು.
2. ಶಿಕ್ಷಕರ ಒಳ್ಳೆಯ ಮಾತುಗಳನ್ನು ಕೇಳಬಾರದು?
3. ಸಮಯಕ್ಕೆ ನಾವು ಹೆಚ್ಚು ಮಹತ್ವವನ್ನು ನೀಡಬೇಕು.
4. ಕಸವನ್ನು ದಿಕ್ಕಾಪಾಲಾಗಿ ಬಿಸಾಡಬೇಕು.
5. ಶಾಲೆಯಲ್ಲಿ ಶಿಸ್ತಿನಿಂದ ವರ್ತಿಸಬೇಕು.
6. ವಾಹನ ಚಲಾಯಿಸುವಾಗ ಹೆಲ್ಮೆಟ್ ಧರಿಸಬಾರದು.
7. ಟ್ರಾಫಿಕ್ ನಿಯಮಗಳನ್ನು ಪಾಲಿಸಬಾರದು.
8. ಕಾಡುಗಳನ್ನು ನಾಶ ಮಾಡಬೇಕು.
9. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು.
10. ಶೌಚಾಲಯವನ್ನು ಬಳಸಿ ನೀರು ಹಾಕಬೇಕು.

| ಕ್ರ.ಸಂ. | ಮಾಡಬೇಕಾದದ್ದು | ಮಾಡಬಾರದ್ದು |
|---|---|---|
| 1 | | |
| 2 | | |
| 3 | | |
| 4 | | |
| 5 | | |

@KTBS NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಚಿತ್ರಗಳನ್ನು ಗಮನಿಸಿ, ಚಿತ್ರದ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.



ಬುನಾದಿ ಹಂತ – ಚಟುವಟಿಕೆ ಹಾಳೆ 21

# ಘಟನೆಯನ್ನು ಅರಿಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ತಮ್ಮ ಆಸುಪಾಸಿನಲ್ಲಿ ಸಂಭವಿಸುವ ಘಟನೆಗಳ/ಅಂಶಗಳ ಬಗ್ಗೆ ಗಮನ ಹರಿಸಿ, ಅವುಗಳ ಬಗ್ಗೆ ಮೌಖಿಕವಾಗಿ ಪ್ರತಿಕ್ರಿಯೆ ನೀಡುವರು ಮತ್ತು ಪ್ರಶ್ನೆಗಳನ್ನು ಕೇಳುವರು."

**ಚಟುವಟಿಕೆ 1 :** ಕೊಟ್ಟಿರುವ ಕೋಷ್ಠಕದಲ್ಲಿನ ಅಕ್ಷರಗಳನ್ನು ಬಳಸಿಕೊಂಡು ಘಟನೆಗೆ ಸಂಬಂಧಿಸಿದ ಪದಗಳನ್ನು ಹುಡುಕಿ ಬರೆಯಿರಿ.

| | | | | | | |
|---|---|---|---|---|---|---|
| ಹ | ಬಾ | ಲ್ಯ | ವಿ | ವಾ | ಹ | ಆ |
| ವ | ಕ | ಳ್ಳ | ತ | ನ | ಬೆ | ಸೈ |
| ಅ | ರ | ಣ್ಯ | ನಾ | ಶ | ಲೆ | ಮ |
| ಕು | ಚಾ | ದ | ಮೋ | ಸ | ಏ | ಸ |
| ಡು | ಷ್ಟ | ಗೋ | ಕ್ಷಿ | ಳೆ | ಎ | ನ |
| ಕ | ಭ್ರ | ಅ | ಪ | ಣಿ | ಕೆ | ಎ |
| ಬಾ | ಲ | ಕಾ | ರ್ಮಿ | ಕ | ಪ | ನೀ |

**ಮಾದರಿ :** ಅರಣ್ಯ ನಾಶ

1. ______________________ 2. ______________________

3. ______________________ 4. ______________________

5. ______________________ 6. ______________________

7. ______________________ 8. ______________________

9. ______________________ 10. ______________________

@KTBS NOT TO BE REPUBLISHED

**ಚಟುವಟಿಕೆ 2 :** ಈ ಕೆಳಗಿನ ಕಥೆಯನ್ನು ಓದಿ ಅರ್ಥೈಸಿಕೊಂಡು, ಚಿತ್ರವನ್ನು ಗಮನಿಸಿ ಮುಂದೆ ಸರಿಯಾದ ಉತ್ತರ ಬರೆಯಿರಿ.

## ಸಿಂಹಕ್ಕೆ ಪಾಠ ಕಲಿಸಿದ ಇಲಿ

ಒಂದು ದೊಡ್ಡ ಕಾಡು, ಅಲ್ಲೊಂದು ಭಯಂಕರ ಸಿಂಹ. ಒಂದು ಮಧ್ಯಾಹ್ನ ಭರ್ಜರಿ ಬೇಟೆಯಾಡಿ ಮಾಂಸ ತಿಂದು ಗೊರಕೆ ಹೊಡೆಯುತ್ತಾ ನಿದ್ದೆ ಮಾಡುತ್ತಿರುತ್ತದೆ. ಅದು ಸಿಟ್ಟಿನಲ್ಲಿ ಹೊರಬಂದು ನೋಡಿದರೆ ದೊಡ್ಡ ಸಿಂಹ! ಇಲಿ ಮರಿ ಸಿಂಹಕ್ಕೆ ಕೂಗಿ ಹೇಳುತ್ತದೆ. ಸಿಂಹ ಗೊರಕೆ ಹೊಡೆಯೋದನ್ನ ನಿಲ್ಲಿಸು. ನಿನ್ನ ಗೊರಕೆ ಶಬ್ದಕ್ಕೆ ನಮಗೆ ಯಾರಿಗೂ ನಿದ್ದೆ ಮಾಡುವುದಕ್ಕೆ ಆಗುತ್ತಿಲ್ಲ ಅದರ ಗೊರಕೆ ಮುಂದುವರೆಯುತ್ತಿತ್ತು. ಇಲಿ ಮರಿ ಸಿಟ್ಟಿನಲ್ಲಿ ಅದರ ಮೈಮೇಲೆಲ್ಲಾ ಓಡಾಡುತ್ತಿರುತ್ತದೆ. ಆದರೂ ಸಿಂಹಕ್ಕೆ ಎಚ್ಚರವಾಗದಿದ್ದಾಗ ಅದರ ಮೀಸೆಯಲ್ಲಿ ಜೋತಾಡುತ್ತದೆ. ಊಹೂಂ ಎಚ್ಚರಾನೆ ಇಲ್ಲ. ಕೊನೆಗೆ ಕಿವಿಯ ಬಳಿ ಹೋಗಿ ಜೋರಾಗಿ ಕಚ್ಚುತ್ತದೆ. ಆಗ ಸಿಂಹಕ್ಕೆ ಸಣ್ಣ ಸೊಳ್ಳೆ ಕಚ್ಚಿದಂತಾಗಿ ಎಚ್ಚರವಾಗುತ್ತದೆ. ಕಿವಿಯತ್ತ ಕೈ ತೆಗೆದುಕೊಂಡು ಹೋಗಿ ನೋಡಿದರೆ ಪುಟ್ಟಇಲಿ ಸಿಟ್ಟಿನಲ್ಲಿ ಸಿಂಹ ಅದನ್ನು ತನ್ನ ಗುಹೆಯಂತಹ ಬಾಯಿ ಹತ್ತಿರ ತೆಗೆದುಕೊಂಡು ಹೋಗುತ್ತದೆ. ಇಲಿಗೆ ಈಗ ಭಯದಲ್ಲಿ ಗಡಗಡ ನಡುಗುತ್ತಾ, ಹೆದರುತ್ತ "ಪ್ಲೀಸ್ ನನ್ನ ಬಿಟ್ಟುಬಿಡು ಇನ್ನೊಂದು ಸಲ ನೀನು ಕಷ್ಟದಲ್ಲಿರುವಾಗ ಖಂಡಿತ ಸಹಾಯ ಮಾಡುತ್ತೇನೆ" ಎಂದು ಹೇಳುತ್ತದೆ. ಇಲಿಯ ಮಾತು ಕೇಳಿ ಜೋರು ನಗು ಬರುತ್ತದೆ. "ನನ್ನ ಮೀಸೆಯಷ್ಟು ಉದ್ದ ಇಲ್ಲ. ನೀನು ನನಗೆ ಸಹಾಯ ಮಾಡೋದಾ?" ಎಂದು ಗಹಗಹಿಸಿ ನಗುತ್ತದೆ.ಹೊಟ್ಟೆ ತುಂಬಿದ್ದಕ್ಕೋ, ಕನಿಕರ ಬಂದಿದ್ದಕ್ಕೋ ಇಲಿಯನ್ನು ಬಿಡುತ್ತದೆ.ಇದಾದ ಸ್ವಲ್ಪ ದಿನಕ್ಕೆ ಬೇಟೆಗಾರನೊಬ್ಬ ಕಾಡಿನಲ್ಲಿ ಬಲೆ ಹಾಕುತ್ತಾನೆ. ಸಿಂಹ ಅದರಲ್ಲಿ ಬೀಳುತ್ತದೆ. ಇದು ತರಲೆ ಇಲಿ ಕಣ್ಣಿಗೆ ಬೀಳುತ್ತದೆ. ಏನೆಂದು ಮಾತನಾಡದೆ ಇಡೀ ಬಲೆಯನ್ನು ಕಚ್ಚಿ ಕಚ್ಚಿ ತುಂಡು ಮಾಡಿ ಸಿಂಹ ಅದರಿಂದ ಹೊರಬರುವ ಹಾಗೆ ಮಾಡುತ್ತದೆ. ಸಿಂಹಕ್ಕೆ ತಾನು ಆ ದಿನ ಮಾಡಿದ ಅಪಹಾಸ್ಯದ ನೆನಪಾಗಿ ಬೇಜಾರಾಗುತ್ತದೆ. ಅದು ಆಮೇಲೆ ಯಾವತ್ತೂ ತನಗಿಂತ ಚಿಕ್ಕವರ ಬಗ್ಗೆ ಕೇವಲವಾಗಿ ಮಾತನಾಡುವುದಿಲ್ಲ.













©KTBS NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ವಿಷಯವನ್ನು ಓದಿ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.




NOT TO BE REPUBLISHED @KTBS

1. ನಾವು ಕಾಗದ /ಪತ್ರಗಳನ್ನು ಎಲ್ಲಿಂದ ಕಳುಹಿಸಬಹುದು ?

---

2. ನಮ್ಮ ಕಾಗದ /ಪತ್ರಗಳನ್ನುಯಾರು ತಲುಪಿಸುತ್ತಾರೆ ?

---

3. ಯಾರು ಈಶನಿಗೆ ಕಾಗದ ಕಳುಹಿಸುತ್ತಾರೆ?

---

4. ನಾವು ಅಂಚೆ ಕಛೇರಿಯಿಂದ ಬೇರೆ ಏನನ್ನು ಖರೀದಿಸಬಹುದು?

---

ಬುನಾದಿ ಹಂತ - ಚಟುವಟಿಕೆ ಹಾಳೆ 22

# ಘಟನೆ ಅರಿತು ನಡೆಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಆಲಿಸಿದ ಸಾಹಿತ್ಯ ರಚನೆಗಳ ವಿಷಯ ವಸ್ತು, ಘಟನೆ, ಚಿತ್ರ, ಪಾತ್ರ, ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುವರು, ಪ್ರಶ್ನೆಕೇಳುವರು. ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುವರು ಮತ್ತು ತನ್ನ ಮಾತಿಗೆ ತಾರ್ಕಿಕತೆಯನ್ನು ನೀಡುವರು

**ಚಟುವಟುಕೆ 1 :** ಚಿತ್ರದಲ್ಲಿ ತೋರಿಸಿರುವಂತೆ ಸುತ್ತಲಿನ ಜಾಗದಲ್ಲಿ ನೀವಿದ್ದರೆ ಏನು ಮಾಡುವಿರಿ?



@KTBS NOT TO BE REPUBLISHED

**ಚಟುವಟುಕೆ 2 :** ಈ ಕೆಳಗಿನ ವಿಷಯಗಳನ್ನು ಕುರಿತು ಎರಡು ನಿಮಿಷ ಮಾತನಾಡಿರಿ

(ನಿಮ್ಮ ಅನುಭವ/ ಊಹಿಸಿ ಮಾತನಾಡಿ)

1. ಜಾತ್ರೆ
2. ಹಬ್ಬ
3. ಸಂತೆ
4. ನಾಟಕ

**ಚಟುವಟಿಕೆ 3 :** ಕೆಳಗಿನ ಚಿತ್ರವನ್ನು ಗಮನಿಸಿ ನಿಮ್ಮದೇ ಮಾತಿನಲ್ಲಿ ಬರೆಯಿರಿ.





NOT FOR REPUBLISHED ©KTBS

## ಬುನಾದಿ ಹಂತ - ಚಟುವಟಿಕೆ ಹಾಳೆ 23
# ಕಥೆ ಕಥೆ ಚಿತ್ರಕಥೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ಕಥೆ, ಕವಿತೆ ಮತ್ತು ಇತರ ವಸ್ತು ವಿಷಯಗಳನ್ನು ತಮ್ಮದೇ ಶೈಲಿ ಮತ್ತು ಭಾಷೆಯಲ್ಲಿ ವಿವರಿಸುತ್ತಾ, ಅದರಲ್ಲಿ ತಮ್ಮದೇ ಸ್ವಂತದ ಕಥೆ ವಿಷಯಗಳನ್ನು ಸೇರಿಸುವರು."

**ಚಟುವಟಿಕೆ 1 :** ಚಿತ್ರಗಳನ್ನು ಗಮನಿಸಿ ನೀಡಿರುವ ವಾಕ್ಯಗಳನ್ನು ಕ್ರಮಬದ್ಧವಾಗಿ ಜೋಡಿಸಿ ಬರೆಯಿರಿ





1. ಆ ಇರುವೆಯನ್ನು ಬದುಕಿಸಲೆಂದು ಪಾರಿವಾಳವು ಒಂದು ಎಲೆಯನ್ನು ಅದರ ಬಳಿಗೆ ಹಾಕಿತು ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕು.
2. ಒಂದು ಕಾಡಿನಲ್ಲಿ ನದಿಯ ಪಕ್ಕದಲ್ಲಿ ಆಲದ ಮರವಿತ್ತು. ಆ ಮರದಲ್ಲಿ ಪಾರಿವಾಳವು ವಾಸವಾಗಿತ್ತು.
3. ಬೇಡನೊಬ್ಬನು ಪಾರಿವಾಳವನ್ನು ಕೊಲ್ಲಲು ತನ್ನ ಬಾಣವನ್ನು ಗುರಿ ಇಟ್ಟಿದ್ದನು.
4. ಆಗ ಆ ಇರುವೆಯು ಬೇಡನ ಕಾಲನ್ನು ಕಚ್ಚಿ ಬಾಣದ ಗುರಿಯನ್ನು ತಪ್ಪಿಸಿತು. ಪಾರಿವಾಳದ ಪ್ರಾಣವನ್ನು ಕಾಪಾಡಿತು.
5. ಆ ಪಾರಿವಾಳವು ನದಿಯಲ್ಲಿ ತೇಲುತ್ತಾ ಮುಳುಗುತ್ತಾ ಇದ್ದ ಇರುವೆಯೊಂದನ್ನು ನೋಡಿತು.
6. ಆ ಎಲೆಯ ಸಹಾಯದಿಂದ ಇರುವೆಯು ದಡ ಸೇರಿ ಪಾರಿವಾಳಕ್ಕೆ ಕೃತಜ್ಞತೆ ಸಲ್ಲಿಸಿತು.

NOT TO BE REPUBLISHED @KTBS

**ಚಟುವಟಿಕೆ 2 :** ಕೊಟ್ಟಿರುವ ಚಿತ್ರಗಳನ್ನು ನೋಡಿ ನಿಮ್ಮದೆ ಮಾತುಗಳಲ್ಲಿ ಕಥೆಯನ್ನು ಬರೆದು, ಕಥೆಗೆ ಸರಿಹೊಂದುವ ಶೀರ್ಷಿಕೆಯನ್ನು ಬರೆಯಿರಿ.



**ಚಟುವಟಿಕೆ 3 :** ನೀವು ಕೇಳಿರುವ ಕಥೆಗಳ ಹೆಸರನ್ನು ಪಟ್ಟಿಮಾಡಿ.

@KTBS NOT TO BE REPUBLISHED

# ಊಹಿಸಿ ಬರೆಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** "ಹೊಸ ಪಠ್ಯವಸ್ತುವನ್ನು ಓದಿ ಅಥವಾ ನೋಡಿ, ಅದರ ಅರ್ಥವನ್ನು ಊಹಿಸಿಕೊಂಡು, ತಮ್ಮ ಶಬ್ದಗಳಲ್ಲಿ ಬರೆಯುವರು."

**ಚಟುವಟಿಕೆ 1 :** ಕೊಟ್ಟಿರುವ ಪದ್ಯವನ್ನು ಓದಿ ಸಾರಾಂಶ ಬರೆಯಿರಿ.

ಸತ್ಯವನೆಂದಿಗು ಬಿಡಬೇಡ:
ಮಿಥ್ಯನೆಂದು ಹಿಡಿಯಲು ಬೇಡ!
ಚಿತ್ತದಿ ಭಕ್ತಿಯ ಬೀಜವನು
ಬಿತ್ತುತ ಪಡೆಯೊ ಮುಕ್ತಿಯನು!

**ಚಟುವಟಿಕೆ 2 :** ಚಿತ್ರ ನೋಡಿ ಕಥೆಯನ್ನು ಊಹಿಸಿ ಬರೆಯಿರಿ.



NOT TO BE REPUBLISHED @KTBS

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 1
## ಘಟನೆ ಕುರಿತು ಮಾತನಾಡೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** "ಕೇಳಿದ ಅಥವಾ ಓದಿದ ಸಾಹಿತ್ಯ, ಹಾಸ್ಯ, ಸಾಹಸ, ಸಾಮಾಜಿಕ ಮುಂತಾದ ವಿಷಯಗಳ ಆಧರಿಸಿದ ಕಥೆ, ಕವಿತೆ, ವಿಷಯವಸ್ತು, ಘಟನೆಗಳು, ಚಿತ್ರಗಳು, ಪಾತ್ರಗಳು ಮತ್ತು ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುವರು."

**ಚಟುವಟಿಕೆ 1 :** ಈ ಕವಿತೆಯನ್ನು ಅಭಿನಯದೊಂದಿಗೆ ಹಾಡಿರಿ.

### ಚಡ್ಡಿ – ಗಿಡ್ಡಿ

ಚಡ್ಡಿ ಗಿಡ್ಡಿ ಹಾಕಿಕೊಂಡು
ಕುದುರೆ ಮೇಲೆ ಕುಳಿತುಕೊಂಡು
ಲಗಾಮು ಹಿಡಿದುಕೊಂಡು
ಹೈ ಹೈ ಹೈ

ಲಂಗ ಗಿಂಗ ಹಾಕಿಕೊಂಡು
ಕುದುರೆ ಮೇಲೆ ಕುಳಿತುಕೊಂಡು
ಅಣ್ಣನ ಸೊಂಟ ಹಿಡಿದುಕೊಂಡು
ಹೈ ಹೈ ಹೈ

ಕಂದು ಬಣ್ಣ ನಮ್ಮ ಕುದುರೆ
ಗಾಳಿ ಹಾಗೆ ಓಡೋ ಕುದುರೆ
ನಮ್ಮ ಕುದುರೆ ನಮ್ಮ ಕುದುರೆ
ಹೈ ಹೈ ಹೈ

ಕುದುರೆ ಮೇಲೆ ಕುಳಿತುಕೊಂಡು
ಅದರ ಬೆನ್ನ ತಟ್ಟಿಕೊಂಡು
ಅಲ್ಲಿ ಇಲ್ಲಿ ಸುತ್ತಿಕೊಂಡು
ಹೈ ಹೈ ಹೈ



–ಜಿ. ಪಿ. ರಾಜರತ್ನಂ

© KTBS NOT TO BE REPUBLISHED

**ಚಟುವಟಿಕೆ 2 : ಕೊಟ್ಟಿರುವ ನಗೆಹನಿಗಳನ್ನು ಓದಿ ಆನಂದಿಸಿ ಹಾಗೂ ಎರಡು ನಗೆ ಹನಿಗಳನ್ನು ಬರೆಯಿರಿ.**

**ಅಮ್ಮ :** ಮಗನೇ, ಕರೆಂಟ್ ತಂತಿಗಳನ್ನು ಏಕೆ ಮೇಲಕ್ಕೆ ಕಟ್ಟಿರುತ್ತಾರೆ?



**ಮಗ :** ಕೆಳಕ್ಕೆ ಕಟ್ಟಿದರೆ ಹೆಂಗಸರು ಬಟ್ಟೆ ಒಣಗಲು ತಂತಿಗೆ ಹಾಕುತ್ತಾರೆ ಅಂತ...!

**ಟೀಚರ್ :** ಮಕ್ಕಳೇ, 15 ಹಣ್ಣುಗಳನ್ನು ಹೆಸರಿಸಿ.

**ವಿದ್ಯಾರ್ಥಿ :** ಸೇಬು, ಕಲ್ಲಂಗಡಿ, ಮೂಸಂಬಿ, ಒಂದು ಡಜನ್ ಬಾಳೆಹಣ್ಣು...!!







@KTBS
NOT TO BE REPUBLISHED



**ಚಟುವಟಿಕೆ 3 : ಅನುಸ್ವಾರ ಬಳಸಿ ಪದ ರಚಿಸಿ.**

| ಮಾದರಿ – ಅ _ ಕಣ | ಅಂಕಣ |
| --- | --- |
| 1. ಕ _ ಗಳು | |
| 2. ಅ _ ಗಡಿ | |
| 3. ಚ _ ದನ | |
| 4. ಪ _ ಕಜ | |
| 5. ಕು _ ಕುಮ | |
| 6. ಬ _ ಧನ | |
| 7. ಕೊ _ ಕಣಿ | |

**ಚಟುವಟಿಕೆ 4 : ಕೆಳಗೆ ನೀಡಿರುವ ಗುಣಿತಾಕ್ಷರದಿಂದ ಕೂಡಿದ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ – ಕಂದ ಕ್+ಅ+ನ್+ದ್+ಅ**

1) ಭಾರತ = ______

2) ಸಂತೋಷ = ______

3) ದಾರಿ = ______

4) ಪುಸ್ತಕ = ______

5) ಹಂಸ = ______

6) ದೆಹಲಿ = ______

7) ಕಾಸು = ______

@KTBS NOT TO BE REPUBLISHED



**ಹಿಮ್ಮಾಹಿತಿ : 'ಅನುಸ್ವಾರದ ಮುಂದೆ ವರ್ಗೀಯ ವ್ಯಂಜನಾಕ್ಷರಗಳು ಬಂದಾಗ ಅದೇ ವರ್ಗದ ಅನುನಾಸಿಕವನ್ನು ಬಳಸಬೇಕು.'**

ಉದಾ: ಕ ವರ್ಗ ಅಕ್ಷರಗಳು ಬಂದಾಗ 'ಙ್'

ಚ ವರ್ಗ ಅಕ್ಷರಗಳು ಬಂದಾಗ ಞ್

ಟ ವರ್ಗ ಅಕ್ಷರಗಳು ಬಂದಾಗ ಣ್

ತ ವರ್ಗ ಅಕ್ಷರಗಳು ಬಂದಾಗ ನ್

ಪ ವರ್ಗ ಅಕ್ಷರಗಳು ಬಂದಾಗ ಮ್

**ಅವರ್ಗೀಯ ವ್ಯಂಜನಾಕ್ಷರಗಳು ಬಂದಾಗ 'ಮ್' ಕಾರ ಬಳಸಬೇಕು.**

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 2
# ಕಥೆ ಹೇಳೋಣ ಬನ್ನಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** "ಕನ್ನಡ ಭಾಷೆಯಲ್ಲಿನ ವಿವಿಧ ಓದುವ ಸಾಮಗ್ರಿಗಳನ್ನು ಅರ್ಥೈಸಿಕೊಂಡು ಓದುವರು ಮತ್ತು ಅವುಗಳ ಬಗೆಗೆ ಅಭಿಪ್ರಾಯ ವ್ಯಕ್ತಪಡಿಸುವರು".

**ಚಟುವಟಿಕೆ 1 : ಕಥೆಯನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ಒಂದು ಇಲಿ ವಜ್ರವನ್ನು ನುಂಗಿತು. ವಜ್ರದ ಮಾಲೀಕ ಇಲಿಯನ್ನು ಕೊಲ್ಲುವುದಕ್ಕಾಗಿ ಒಬ್ಬ ವ್ಯಕ್ತಿಯನ್ನು ನೇಮಕ ಮಾಡುತ್ತಾನೆ. ಆ ವ್ಯಕ್ತಿ ಇಲಿಯನ್ನು ಕೊಲ್ಲಲು ಬಂದಾಗ ಸಾವಿರಾರು ಇಲಿಗಳು ಗುಂಪಾಗಿ ಕುಳಿತಿದ್ದವು. ಆದರೆ ಒಂದು ಇಲಿ ಮಾತ್ರ ಗುಂಪಿನಿಂದ ದೂರ ಎತ್ತರವಾದ ಜಾಗದಲ್ಲಿ ಕುಳಿತಿತ್ತು. ವ್ಯಕ್ತಿಯು ಆ ಇಲಿಯನ್ನು ಕೊಂದಾಗ ಅದರ ಹೊಟ್ಟೆಯಲ್ಲಿ ವಜ್ರವು ದೊರಕಿತು. ಆಶ್ಚರ್ಯ ಚಕಿತನಾದ ವಜ್ರದ ಮಾಲೀಕ ಇಷ್ಟು ದೊಡ್ಡ ಗುಂಪಿನಲ್ಲಿ ವಜ್ರ ನುಂಗಿದ ಇಲಿ ಇದೇ ಎಂದು ನಿನಗೆ ಹೇಗೆ ಗೊತ್ತಾಯಿತು? ಎಂದು ಪ್ರಶ್ನಿಸಿದ. 'ತುಂಬಾ ಸುಲಭ' ಎಂದು ಆ ವ್ಯಕ್ತಿ ಉತ್ತರಿಸಿದ. ಒಬ್ಬ ತಾನು ಶ್ರೀಮಂತನಾದಾಗ ಆತ ಸಾಮಾನ್ಯರೊಂದಿಗೆ ಬೆರೆಯುವುದಿಲ್ಲ ಹಾಗೂ ಅಸಾಮಾನ್ಯನಂತೆ ವರ್ತಿಸುತ್ತಾನೆ.

1) ಇಲಿಯು ಏನನ್ನು ನುಂಗಿತು?

......................................................................................................................

2) ವಜ್ರದ ಮಾಲೀಕನು ಏಕೆ ಆಶ್ಚರ್ಯ ಚಕಿತನಾದ?

......................................................................................................................

3) ಈ ಕಥೆಯ ಪ್ರಕಾರ ಶ್ರೀಮಂತ ವ್ಯಕ್ತಿಯು ಹೇಗೆ ವರ್ತಿಸುತ್ತಾನೆ?

......................................................................................................................

4) ಈ ಕಥೆಗೆ ಸೂಕ್ತವಾದ ಶೀರ್ಷಿಕೆಯನ್ನು ಬರೆಯಿರಿ.

......................................................................................................................

**ಚಟುವಟಿಕೆ 2 : ಕೊಟ್ಟಿರುವ ಚಿತ್ರವನ್ನು ನೋಡಿ ಕಥೆಯನ್ನು ಬರೆಯಿರಿ.**







@KTBS NOT TO BE REPUBLISHED



## ಚಿತ್ರ ನೋಡಿ ಕಥೆ ಬರೆಯಿರಿ

@KTBS
NOT TO BE REPUBLISHED

**ಚಟುವಟಿಕೆ 3 : ಕಥೆ ಬೆಳೆಸೋಣ**

1) ಒಂದು ಊರಿನಲ್ಲಿ ಒಬ್ಬ ರೈತನಿದ್ದನು. 2) ________________

3) ________________ 4) ________________

5) ________________ 6) ________________

7) ________________ 8) ________________

9) ________________ 10) ________________

11) ________________ 12) ________________

13) ________________ 14) ________________

**ಚಟುವಟಿಕೆ 4 : ಕೊಟ್ಟಿರುವ ಪದಗಳನ್ನು ಬಳಸಿಕೊಂಡು ಕಥೆಯನ್ನು ಪೂರ್ಣಗೊಳಿಸಿ.**



ಒಂದು ಕಾಡು – ಒಂದು ನರಿ – ದ್ರಾಕ್ಷಿ ತೋಟ – ಎತ್ತರದಲ್ಲಿ ಹಣ್ಣಿನ ಗೊಂಚಲು – ಬಾಯಲ್ಲಿ ನೀರೂರಿತು.–ಮೇಲಕ್ಕೆ ನೆಗೆಯಿತು. ಸಿಗಲಿಲ್ಲ. – ಮತ್ತೆ ನೆಗೆಯಿತು. – ಎಟುಕಲಿಲ್ಲ. – ಪುನಃ ನೆಗೆಯಿತು. – ದ್ರಾಕ್ಷಿ ಹುಳಿ ಎಂದು

@KTBS NOT TO BE REPUBLISHED



ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 3

# ಧ್ವನಿ ಗುರುತಿಸೋಣ, ವ್ಯತ್ಯಾಸ ತಿಳಿಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ:** "ವಿವಿಧ ಪ್ರಕಾರದ ಧ್ವನಿಗಳನ್ನು ಆಲಿಸಿದ ಅನುಭವಗಳನ್ನು, ವ್ಯತ್ಯಾಸಗಳನ್ನು ತಮ್ಮದೇ ರೀತಿಯಲ್ಲಿ ಬರವಣಿಗೆಯಲ್ಲಿ ಅಭಿವ್ಯಕ್ತಿಗೊಳಿಸುವರು."

**ಚಟುವಟಿಕೆ 1 : "ಅಕ್ಕಿ ಹಕ್ಕಿಯನ್ನು ತಿಂದಿತು" ಈ ವಾಕ್ಯವನ್ನು ಚಿತ್ರನೋಡಿ ಸರಿಪಡಿಸಿ ಬರೆಯಿರಿ.**



